24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 148 | ನವದೆಹಲಿ | ಬೆಲೆ ₹10 | ನವಂಬರ್ 25, 2026 ಬುಧವಾರ

ಒಳಪುಟಗಳಲ್ಲಿ



ಪೈಲಟ್ ಕೊರತೆ ತೀವ್ರ: ಕಾರ್ಯಾಚರಿಸುತ್ತಿರುವುದು ಕೇವಲ 270 ಹೆಲಿಕಾಪ್ಟರ್ - ಪು.4

ತಾಪಂ, ಜಿಪಂ ಮೀಸಲು ಅಧಿಸೂಚನೆ ಪ್ರಕಟ ಜನವರಿಯಲ್ಲಿ ಚುನಾವಣೆ

ಬೆಂಗಳೂರು, ನ.24: ರಾಜ್ಯ ಸರ್ಕಾರ ಜಿ.ಪಂ. ತಾಪಂ. ಕ್ಷೇತ್ರಗಳ ಮೀಸಲು ಅಂತಿಮ ಅಧಿಸೂಚನೆ ಪ್ರಕಟಿಸಿದ್ದು, ಜನವರಿಯಲ್ಲಿ ಚುನಾವಣೆ ನಡೆಯಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ರಾಜ್ಯದ 30 ಜಿಲ್ಲೆಗಳ 1101 ಜಿಲ್ಲಾ ಪಂಚಾಯತಿ ಕ್ಷೇತ್ರ ಹಾಗೂ 234 ತಾಲೂಕು ಪಂಚಾಯತಿಗಳ 3580 ಸದಸ್ಯ ಸ್ಥಾನದ ಮೀಸಲು ನಿಗದಿ ಮಾಡಿ ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದೆ ಎಂದರು.

ಈಗ ನಮ್ಮ ಕೆಲವು ಪಂಚಾಯತಿಗಳನ್ನು ಮೇಲ್ದರ್ಜೆಗೇರಿಸಿದ್ದರಿಂದ ಹಾಗೂ ಕೆಲವು ಗ್ರಾಮ ಪಂಚಾಯತಿ ಕ್ಷೇತ್ರಗಳು ನಗರಸಭೆ, ನಗರಪಾಲಿಕೆ, ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ ಪರಿಣಾಮವಾಗಿ ಕ್ಷೇತ್ರ ಪುನರ್ ವಿಂಗಡಣೆ ಅನಿವಾರ್ಯವಾಗಿತ್ತು. ಹೀಗಾಗಿ ವಿಳಂಬವಾಯಿತು. ಸರ್ಕಾರ ತನ್ನ ಕರ್ತವ್ಯ ನಿಭಾಯಿಸಿದ್ದು, ರಾಜ್ಯ ಚುನಾವಣಾ ಆಯೋಗ ವೇಳಾಪಟ್ಟಿ ಘೋಷಿಸಿ ಚುನಾವಣೆ ನಡೆಸಲಿದೆ. ಬಹುತೇಕ ಜನವರಿಯಲ್ಲಿ ಚುನಾವಣೆಗಳು ನಡೆಯಲಿವೆ ಎಂದರು. https://erajyapatra.karnataka.gov.in/ದಲ್ಲಿ ಎಲ್ಲ ಅಧಿಸೂಚನೆಗಳೂ ಲಭ್ಯವಿದೆ.

ನಗರ ತ್ಯಾಜ್ಯ ನಿರ್ವಹಣೆ ಸಮಸ್ಯೆಗೆ ಶಾಶ್ವತ ಪರಿಹಾರ ಅಗತ್ಯ: ಡಿ.ಕೆ. ಶಿವಕುಮಾರ್

ಒಸಾಕಾ (ಜಪಾನ್), ನ.24: ನಮ್ಮ ನಗರ ತ್ಯಾಜ್ಯ ನಿರ್ವಹಣಾ ಸಮಸ್ಯೆಗೆ ಶಾಶ್ವತ ಪರಿಹಾರಗಳನ್ನು ಹುಡುಕುವುದು. ತ್ಯಾಜ್ಯದಿಂದ ವಿದ್ಯುತ್ ತಯಾರಿಸುವ ಜಾಗತಿಕ ವಿನೂತನ ಪದ್ಧತಿಗಳ ಬಗ್ಗೆ ಅಧ್ಯಯನ ಮಾಡುವುದು ಈ ಭೇಟಿಯ ಉದ್ದೇಶವಾಗಿದೆ" ಎಂದು ಸಿಎಂ ಡಿಕೆ ಶಿವಕುಮಾರ್ ತಿಳಿಸಿದರು.

ಜಪಾನ್ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ನಿಯೋಗ ಒಸಾಕಾದ ಮೈಶಿಮಾ ತ್ಯಾಜ್ಯ ದಹನ ಘಟಕಕ್ಕೆ ಮಂಗಳವಾರ ಭೇಟಿ ನೀಡಿ ಯೋಜಿತ ನಗರ ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯನ್ನು ಪರಿಶೀಲಿಸಿತು.

ಮೈಶಿಮಾ ತ್ಯಾಜ್ಯ ದಹನ ಘಟಕದಲ್ಲಿ ದಿನಕ್ಕೆ 900 ಟನ್ ಪುರಸಭೆ ತ್ಯಾಜ್ಯವನ್ನು ವಿದ್ಯುತ್ ಆಗಿ ಪರಿವರ್ತಿಸುವ ಬಹಳ ಮುಂದುವರಿದ ತಂತ್ರಜ್ಞಾನದ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಿತು.

ಕಲಾತ್ಮಕ ವಾಸ್ತುಶಿಲ್ಪದ ವಿಶೇಷ: ಮೈಶಿಮಾ ತ್ಯಾಜ್ಯ ಸಂಸ್ಕರಣಾ ಘಟಕದ ಮತ್ತೊಂದು ವಿಶೇಷವೆಂದರೆ ಅದರ ವಿಶಿಷ್ಟ ವಾಸ್ತುಶಿಲ್ಪ. ಖ್ಯಾತ ಆಸ್ಟ್ರಿಯನ್ ಕಲಾವಿದ ಫ್ರೈಡೆನ್ಸ್‌ರೀಚ್ ಹಂಡರ್ಟ್‌ವಾಸರ್ ಈ ಘಟಕದ ವಿನ್ಯಾಸ ರೂಪಿಸಿದ್ದಾರೆ. ವರ್ಣರಂಜಿತ ಮುಂಭಾಗ, ವಿಭಿನ್ನ ವಿನ್ಯಾಸಗಳು ಹಾಗೂ ಹಸಿರು ಪರಿಸರ ಘಟಕಕ್ಕೆ ವಿಶೇಷ ಆಕರ್ಷಣೆ ನೀಡಿವೆ. ಕಲೆ, ಪರಿಸರ ವಿಜ್ಞಾನ ಮತ್ತು ಕೈಗಾರಿಕಾ ಮೂಲಸೌಕರ್ಯವನ್ನು ಒಂದೇ ಕಡೆ ಬೆಸೆಯುವ ಮಾದರಿ ಇದಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ವಿವರಿಸಿದ್ದಾರೆ.

ಜಪಾನ್‌ನ ಒಸಾಕಾ ತ್ಯಾಜ್ಯ ದಹನ ಘಟಕಕ್ಕೆ ಭೇಟಿ
'ತ್ಯಾಜ್ಯದಿಂದ ವಿದ್ಯುತ್' ಮಾದರಿ ಅಧ್ಯಯನ



ಕರ್ನಾಟಕದ ಮೂಲಸೌಕರ್ಯ ಬಲಪಡಿಸಲು ಸಹಕಾರಿ

ನಗರ ಯೋಜನೆ, ಮೂಲಸೌಕರ್ಯ ಮತ್ತು ಪರಿಸರ ನಿರ್ವಹಣೆಯಲ್ಲಿ ಜಾಗತಿಕ ಮನ್ನಣೆ ಪಡೆದ ಇಂಥ ಮಾದರಿಗಳನ್ನು ಅರ್ಥಮಾಡಿಕೊಂಡು ಅಳವಡಿಸಿಕೊಳ್ಳುವುದು ರಾಜ್ಯ ಸರ್ಕಾರದ ಗುರಿಯಾಗಿದೆ. ಇಂತಹ ಘಟಕಗಳ ಅಧ್ಯಯನ ಮಾಡುವುದರಿಂದ ಕರ್ನಾಟಕದ ನಗರಗಳ ಮೂಲಸೌಕರ್ಯವನ್ನು ಬಲಪಡಿಸಲು, ವೈಜ್ಞಾನಿಕ ಮತ್ತು ದಕ್ಷ ತ್ಯಾಜ್ಯ ವಿಲೇವಾರಿಯನ್ನು ಉತ್ತೇಜಿಸಬಹುದು. ತ್ಯಾಜ್ಯದಿಂದ ಇಂಧನ ಪರಿಹಾರಗಳನ್ನು ಅನ್ವೇಷಿಸಲು ಮತ್ತು ಸ್ವಚ್ಛ, ಸುಸ್ಥಿರ ಹಾಗೂ ವಾಸಯೋಗ್ಯ ನಗರಗಳನ್ನು ನಿರ್ಮಿಸಲು ನೆರವಾಗುತ್ತದೆ" ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಪ್ರತಿದಿನ ವಿದ್ಯುತ್ ಆಗಿ ಪರಿವರ್ತನೆಯಾಗುತ್ತಿರುವ ೯೦೦ ಟನ್ ನಗರ ತ್ಯಾಜ್ಯ

ಮೈಶಿಮಾ ದ್ವೀಪದಲ್ಲಿ 2001ರಿಂದ ಕಾರ್ಯನಿರ್ವಹಿಸುತ್ತಿರುವ ತ್ಯಾಜ್ಯ ದಹನಕಾರಿ 2 ಘಟಕಗಳ ಮೂಲಕ ಪ್ರತಿದಿನ ಗರಿಷ್ಠ 900 ಟನ್ ಘನ ತ್ಯಾಜ್ಯವನ್ನು ಸಂಸ್ಕರಿಸಿ, 32 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಘಟಕವು ತನಗೆ ಬೇಕಾದಷ್ಟು ವಿದ್ಯುತ್ ಬಳಸಿಕೊಂಡು ಉಳಿದಿದ್ದನ್ನು ವಿದ್ಯುತ್ ಜಾಲಕ್ಕೆ ಪೂರೈಸುತ್ತಿದೆ. ಈ ಘಟಕವು ಸುಧಾರಿತ ದಹನ ನಿಯಂತ್ರಣ, ನಿರಂತರ ಹೊರಸೂಸುವಿಕೆ ಮೇಲ್ವಿಚಾರಣೆ ಮತ್ತು ಆಧುನಿಕ ಮಾಲಿನ್ಯ ನಿಯಂತ್ರಣ ವ್ಯವಸ್ಥೆಗಳನ್ನು ಬಳಸುತ್ತದೆ. ಇದರಿಂದ ತ್ಯಾಜ್ಯ ಸಂಸ್ಕರಣೆ ವೈಜ್ಞಾನಿಕ ವಾಗಿ ನಡೆದು, ಪರಿಸರದ ಮೇಲಿನ ದುಷ್ಪರಿಣಾಮ ಕಡಿಮೆಯಾಗುತ್ತದೆ.

ದೆಹಲಿ ವಾಯುಮಾಲಿನ್ಯ: 6 ವರ್ಷದಲ್ಲಿ 6,500 ಶ್ವಾಸಕೋಶ ಕ್ಯಾನ್ಸರ್ ಪ್ರಕರಣ!

ನವದೆಹಲಿ, ನ.24: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ವಾಯುಮಾಲಿನ್ಯದ ತೀವ್ರತೆಯ ನಡುವೆಯೇ ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ಆತಂಕಕಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದು ಬೆಳಕಿಗೆ ಬಂದಿದೆ. ಕಳೆದ 6 ವರ್ಷಗಳ ಅವಧಿಯಲ್ಲಿ ದೆಹಲಿಯಲ್ಲಿ 6,500ಕ್ಕೂ ಹೆಚ್ಚು ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ವರದಿಯಾಗಿವೆ.

ದೆಹಲಿ ಕ್ಯಾನ್ಸರ್ ರಿಜಿಸ್ಟ್ರಿ ಮತ್ತು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ರಾಷ್ಟ್ರೀಯ ಕ್ಯಾನ್ಸರ್ ನೋಂದಣಿ ಕಾರ್ಯಕ್ರಮದ (ಎನ್‌ಸಿಆರ್‌ಪಿ) ದತ್ತಾಂಶಗಳ ಪ್ರಕಾರ 2016ರಿಂದ 2021ರವರೆಗಿನ 6 ವರ್ಷಗಳಲ್ಲಿ ದೆಹಲಿಯಲ್ಲಿ ಒಟ್ಟು 6,547 ಶ್ವಾಸಕೋಶದ ಕ್ಯಾನ್ಸರ್ ಪ್ರಕರಣಗಳು ದಾಖಲಾಗಿವೆ. ಇದೇ ಅವಧಿಯಲ್ಲಿ 738 ಮಂದಿ ಸಾವನ್ನಪ್ಪಿದ್ದಾರೆ. ಅಂದರೆ, ಸರಾಸರಿ ಪ್ರತಿ ಮೂರು ದಿನಕ್ಕೊಂದು ಸಾವು ಸಂಭವಿಸಿದಂತಾಗಿದೆ.

ಸಾಮಾನ್ಯವಾಗಿ ಶ್ವಾಸಕೋಶದ ಕ್ಯಾನ್ಸರ್‌ಗೆ ಧೂಮಪಾನವೇ ಪ್ರಮುಖ ಕಾರಣ ಎಂದು ಭಾವಿಸಲಾಗಿತ್ತು. ಆದರೆ, ದೆಹಲಿಯ ಆಸ್ಪತ್ರೆಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳಲ್ಲಿ ಧೂಮಪಾನದ ಅಭ್ಯಾಸವೇ ಇಲ್ಲದವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿದೆ ಎಂದು ಏಮ್ಸ್ ಮತ್ತು ರಾಜೀವ್ ಗಾಂಧಿ ಕ್ಯಾನ್ಸರ್ ಇನ್ಸ್ಟಿಟ್ಯೂಟ್‌ನ ತಜ್ಞ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ದೆಹಲಿಯ ವಿಷಕಾರಿ ಗಾಳಿ ಮತ್ತು PM 2.5 ಮಾಲಿನ್ಯ ಕಣಗಳು ಇದಕ್ಕೆ ಪ್ರಮುಖ ಕಾರಣವಾಗಿವೆ ಎಂದು ವಿಶ್ಲೇಷಿಸಿದ್ದಾರೆ.

ಹಿಂದೆ 50 ವರ್ಷ ಮೇಲ್ಪಟ್ಟ ಪುರುಷರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದ ಶ್ವಾಸಕೋಶದ ಕ್ಯಾನ್ಸರ್, ಈಗ 30ರಿಂದ 40 ವರ್ಷದೊಳಗಿನ ಯುವಜನರು ಮತ್ತು ಮಹಿಳೆಯರಲ್ಲೂ ಪತ್ತೆಯಾಗುತ್ತಿದೆ. ಬಹುತೇಕ ಪ್ರಕರಣಗಳು ಕಾಯಿಲೆ ಉಲ್ಬಣಗೊಂಡ ನಂತರವಷ್ಟೇ (3ನೇ ಅಥವಾ 4ನೇ ಹಂತದಲ್ಲಿ) ಪತ್ತೆಯಾಗುತ್ತಿರುವುದು ಸಾವಿನ ಪ್ರಮಾಣ ಹೆಚ್ಚಾಗಲು ಕಾರಣವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಾವೇರಿ-ವೈಗೈ-ಗುಂಡಾರ್ ನದಿ ಜೋಡಣೆ ಯೋಜನೆಗೆ ತಡೆ ಕೋರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಕರ್ನಾಟಕ

ನವದೆಹಲಿ, ನ.24: ತಮಿಳುನಾಡು ಕೈಗೆತ್ತಿಕೊಂಡಿರುವ ಕಾವೇರಿ-ವೈಗೈ-ಗುಂಡಾರ್ ನದಿ ಜೋಡಣೆ ಯೋಜನೆಗೆ ತಡೆ ನೀಡುವಂತೆ ಕೋರಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ಮಧ್ಯಂತರ ಅರ್ಜಿ ಸಲ್ಲಿಸಿದೆ. ಯೋಜನೆಯ ಮೊದಲ ಹಂತದ ಕಾಮಗಾರಿಗಳನ್ನು ತಕ್ಷಣ ಸ್ಥಗಿತಗೊಳಿಸಬೇಕು ಹಾಗೂ ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳನ್ನು ತೆರವುಗೊಳಿಸಲು ಆದೇಶಿಸಬೇಕು ಎಂದು ಕರ್ನಾಟಕ ಮನವಿ ಮಾಡಿದೆ.

ಕರ್ನಾಟಕ ಸರ್ಕಾರವು 2021ರಲ್ಲಿ ಸಲ್ಲಿಸಿರುವ ಮೂಲ ದಾವೆ ಸಂಖ್ಯೆ 3/2021ರ ವಿಚಾರಣೆಯಲ್ಲೇ 2026ರ ನವೆಂಬರ್ 19ರಂದು ಐ.ಎ. ಸಂಖ್ಯೆ 359185/2026ರ



ಅಡಿಯಲ್ಲಿ ಈ ಅರ್ಜಿ ಸಲ್ಲಿಸಿದೆ. ತಮಿಳುನಾಡು ಸರ್ಕಾರ ಮತ್ತು ಕೇಂದ್ರ ಸರ್ಕಾರವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ತಮಿಳುನಾಡು 2021ರ ಜನವರಿ 5ರಂದು ಕಾವೇರಿ (ಕಟ್ಟಲೈ)-ದಕ್ಷಿಣ ವೆಲ್ಲಾರ್-ವೈಗೈ-ಗುಂಡಾರ್ ನದಿ ಜೋಡಣೆ ಯೋಜನೆಗೆ ಕೇಂದ್ರ ಸರ್ಕಾರದಿಂದ ತಾತ್ವಿಕ ಅನುಮತಿ ಹಾಗೂ ರಾಷ್ಟ್ರೀಯ ಯೋಜನೆಯ ಮಾನ್ಯತೆ ಕೋರಿತ್ತು. ಆದರೆ ಕೇಂದ್ರ ಸರ್ಕಾರ ಈವರೆಗೆ ತಾತ್ವಿಕ ಅನುಮತಿ ನೀಡಿಲ್ಲ ಎಂದು ಕರ್ನಾಟಕ ತನ್ನ ಅರ್ಜಿಯಲ್ಲಿ ಉಲ್ಲೇಖಿಸಿದೆ.

2025ರ ಜನವರಿ 20ರಂದು ಹಿಂದಿನ ಮಧ್ಯಂತರ ಅರ್ಜಿಯನ್ನು ವಿಲೇವಾರಿ ಮಾಡುವಾಗ ಸುಪ್ರೀಂ ಕೋರ್ಟ್ ಕೂಡ ಕೇಂದ್ರ ಸರ್ಕಾರ ತಾತ್ವಿಕ ಅನುಮತಿ ನೀಡಿಲ್ಲ ಎಂಬುದನ್ನು ದಾಖಲಿಸಿತ್ತು. ಹೀಗಾಗಿ ಆಗ ಮಧ್ಯಂತರ ಪರಿಹಾರದ ಅಗತ್ಯವಿಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು.

■ ...3ನೇ ಪುಟಕ್ಕೆ

ಪ್ರಧಾನಿ ಮೋದಿಯವರನ್ನೇ ಅಚ್ಚರಿಗೊಳಿಸಿದ ಶಿವಕುಮಾರ್‌ರವರ ಇಂಗ್ಲಿಷ್ ಭಾಷಣ !





ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಕ್ಷಿಣ ಭಾರತದ ಕಾಂಗ್ರೆಸಿನ ಬಲಿಷ್ಠ ಮುಖ್ಯಮಂತ್ರಿ.. ಕಾಂಗ್ರೆಸ್ ಪಕ್ಷದ ಧೈತ್ಯ ಸಂಘಟನಾಕಾರ. 2028ರ ವಿಧಾನಸಭೆ ಮತ್ತು ಲೋಕಸಭೆ ಚುನಾವಣಾ ಪ್ರಚಾರ ಮತ್ತು ಸಂಘಟನೆಯ ಹರಿಕಾರ. ನಾಡಿನ ಎಲ್ಲಾ ಕಾಂಗ್ರೆಸಿನ ಲೋಕಸಭೆ, ವಿಧಾನಸಭೆ ಸದಸ್ಯರು, ಮಂತ್ರಿಗಳು 28ರ ಮಹಾ ಚುನಾವಣೆಯನ್ನು ಮಹತ್ವಪೂರ್ಣವಾಗಿ ತೆಗೆದುಕೊಳ್ಳಬೇಕಾಗಿದೆ. ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಗಳಾದ ತರುವಾಯ ಪ್ರಧಾನಿ ನರೇಂದ್ರ ಮೋದಿ, ಗೃಹಮಂತ್ರಿ ಅಮಿತ್ ಷಾ, ಹಣಕಾಸು ಮತ್ತು ನೀರಾವರಿ ಮಂತ್ರಿಗಳನ್ನು ಭೇಟಿಯಾಗಿ ರಾಜ್ಯದ ಜಟಿಲ ಸಮಸ್ಯೆಗಳನ್ನು ಚರ್ಚಿಸಿದ್ದಾರೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ತೆರಿಗೆ ಹಣದ ಪಾಲನ್ನು ನೀಡಲೇಬೇಕೆಂದು ಬಹಿರಂಗವಾಗಿ ಕೂಗು ಹಾಕಿದ್ದಾರೆ. ಮೇಕೆದಾಟು ನೀರಾವರಿ ಯೋಜನೆಗೆ ಕೇಂದ್ರಸರ್ಕಾರದ ಅನುಮತಿ ಪಡೆದಿದ್ದಾರೆ. ವಿಶ್ವಮಾನ್ಯ ಬೆಂಗಳೂರು ನಗರ ಸಂಚಾರ ದಟ್ಟಣೆಯನ್ನು ಸರಿದೂಗಿಸಲು, ಬೆಂಗಳೂರು ನಗರದ ನಾಲ್ಕು ದಿಕ್ಕಿನಲ್ಲೂ ನೂರು ಕಿಲೋ ಮೀಟರ್ ಮೆಟ್ರೋ ಸಂಚಾರದ ಯೋಜನೆ ಹಮ್ಮಿಕೊಂಡಿದ್ದಾರೆ. ಮುಖ್ಯಮಂತ್ರಿ ಶಿವಕುಮಾರ್ ದಕ್ಷ, ಕ್ರಿಯಾಶೀಲ ಅಭಿವೃದ್ಧಿಯ ಚಿಂತನಕಾರ. ಬೆಂಗಳೂರು ನಿರ್ಮಿಸಿದ ಕೆಂಪೇಗೌಡರ ಅಭಿವೃದ್ಧಿ, ವಾಣಿಜ್ಯ, ನೀರಾವರಿ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಪರಿಕಲ್ಪನೆಯ ಭೂಮಿಕೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ ವಾರ ಮೈಸೂರು ಮತ್ತು ಬೆಂಗಳೂರಿನ ಸಮಾರಂಭಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಮುಂದೆ ಮಾಡಿದ ಇಂಗ್ಲಿಷ್ ಭಾಷಣ ಅಮೋಘ, ಅದ್ಭುತ, ರಾಜಕೀಯ ವಿವೇಚನೆಯ ಉತ್ತುಂಗ. ಶಿವಕುಮಾರ್ ತಮ್ಮ ಭಾಷಪಾಂಡಿತ್ಯ ರಾಜ್ಯದ ಸಮಸ್ಯೆಗಳ ನಿವೇದನೆ ಸಂಯಮ ಪ್ರಧಾನಿ ನರೇಂದ್ರ ಮೋದಿಯವರನ್ನು ದಿಗ್ಭ್ರಮೆಗೊಳಿಸಿದ್ದದ್ದು ಭಾರತದ ಸುದ್ದಿ. ಹನ್ನೆರಡು ವರ್ಷಗಳ ಕಾಲ ಪ್ರಧಾನಿಯಾಗಿರುವ ನರೇಂದ್ರ ಮೋದಿಯವರು, ಶಿವಕುಮಾರ್ ಅವರ ಭಾಷಣವನ್ನು ತದೇಕಚಿತ್ತರಾಗಿ ಮಂದಹಾಸದಿಂದ ಕೇಳಿದ್ದು ವಿಸ್ಮಯ. ಈ ವಾಸ್ತವ ರಾಜಕೀಯ ಘಟನೆಗಳನ್ನು ರಾಜ್ಯದ ಎಲ್ಲ ರಾಜಕೀಯ ಪಕ್ಷದ ನಾಯಕರು ಗಮನಿಸಿದ್ದಾರೆ.

ಭಾರತದ ಎಲ್ಲ ಸುದ್ದಿ ಮಾಧ್ಯಮಗಳು ಬಿತ್ತರಿಸಿದ್ದಾರೆ. ಆಂಧ್ರ, ತಮಿಳುನಾಡು, ಕೇರಳ, ತೆಲಂಗಾಣ, ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ್ ಮುಖ್ಯಮಂತ್ರಿಗಳು ದಿಗ್ಮೂಢರಾಗಿದ್ದಾರೆ. ಸ್ವಯಂ ಪ್ರಧಾನಿ ನರೇಂದ್ರ ಮೋದಿಯವರೆ ಖುಷಿಪಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರನ್ನೆ ತಮ್ಮ ವಿಚಾರಧಾರೆಗಳ ಮೂಲಕ ಮನಗೆದ್ದು ಬರಬೇಕಾದ ತೆರಿಗೆಹಣ, ನೀರಾವರಿ ಮತ್ತು ಮೆಟ್ರೋ ಯೋಜನೆಗಳಿಗೆ ಹಣ ನೀಡುವಂತೆ ವಿನಂತಿಸಿದ್ದು ರಾಜ್ಯ ಮತ್ತು ರಾಷ್ಟ್ರ ರಾಜಕಾರಣದ ಕುಶಾಲಾಗ್ರಮತಿಯ ಮೇರುಘಟ್ಟ. ಇದು ಹರವಿರಂಚರ ವಿಧಿತ! ವಿಧಿ ದೈವ ಭೂಮಂಡಲ, ಆಯಸ್ಸು ಕಾಲನ ಮಿಂಚು! ಭಾರತದೆತ್ತರಕ್ಕೆ ಮುಖ್ಯಮಂತ್ರಿ ಶಿವಕುಮಾರ ಬೆಳೆಯಲಿ ಎಂಬುದು ದಕ್ಷಿಣ ಭಾರತದ ಎಲ್ಲ ರಾಜಕೀಯ ಅಭಿಮಾನಿಗಳ ಆಶೋತ್ತರ. ನೂರು ವರ್ಷಗಳ ಕಾಲ ಕುಮಾರಕೃಪಾ ರಾಜ್ಯದ ಉನ್ನತ ಮಟ್ಟದ ಅತಿಥಿಗೃಹವಾಗಿತ್ತು. ಮೈಸೂರು ರಾಜರ ಆಳ್ವಿಕೆ ಹೊತ್ತಿನಲ್ಲಿ ದಿವಾನರಿಗೆ, ಜನರ ತೆರಿಗೆ ಹಣದಿಂದ ಬ್ರಿಟಿಷರು ಕಟ್ಟಿಸಿದ ಅತಿಥಿಗೃಹ, ದಿವಾನರು ಪ್ರೀತಿಯಿಂದ ತಮ್ಮ ಮಗನ ಹೆಸರನ್ನು ಈ ಅತಿಥಿಗೃಹಕ್ಕೆ ಇಟ್ಟಿದ್ದರು. ಕೆಲವು ದಿವಾನರುಗಳು ವಾಸವಿದ್ದ ದೊಡ್ಡ ಬಂಗಲೆ. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಈ ಅತಿಥಿಗೃಹದಲ್ಲೇ ವಾಸವಿದ್ದರು. ಮುಖ್ಯಮಂತ್ರಿ ಶಿವಕುಮಾರ್‌ರವರು. ಈ ಅತಿಥಿಗೃಹವನ್ನು ತಮ್ಮ ನಿವಾಸವನ್ನಾಗಿ ಮಾಡಿಕೊಂಡಿರುವುದು ಅತಿಸಯೋಕ್ತಿಯೇನಲ್ಲ. ಸಮಸ್ತ ಕನ್ನಡಿಗರು ಬೌದ್ಧಿಕತೆಯ ಪರಂಪರೆ ಬಗ್ಗೆ ಖುಷಿಪಡಬೇಕಾದ ವಿಷಯ. ಅತಿಥಿಗೃಹಕ್ಕೆ ಆಧುನಿಕ ಸೌಲಭ್ಯಗಳ ಸ್ಪರ್ಶ ನೀಡಲಾಗಿದೆ. ಅಗತ್ಯವಿತ್ತು.

ಈ ಪುರಾತನ ಬಂಗಲೆಗೆ ಶಿವಗಂಗ ಅಥವಾ ಗಂಗ ಅತಿಥಿಗೃಹ ಎಂದು ನಾಮಕರಣ ಮಾಡಿರುವುದನ್ನು ನಾನು ಸಮಸ್ತ ಕನ್ನಡಿಗರ ಪರವಾಗಿ ಸ್ವಾಗತಿಸುತ್ತೇನೆ. ನಾಮಕರಣಕ್ಕೆ ರಾಮಕೃಷ್ಣ ಹೆಗ್ಡೆಯವರು ಮುಖ್ಯಮಂತ್ರಿ ಆಗಿದ್ದಾಗ ಈ ಅತಿಥಿಗೃಹದ ಹಿಂಭಾಗದಲ್ಲಿ ಮೂರು ಕೊಠಡಿಗಳನ್ನು ನಿರ್ಮಿಸಿದ್ದು ಎಲ್ಲರಿಗೂ ಗೊತ್ತಿದೆ. ಸಿದ್ದರಾಮಣ್ಣ ಮುಖ್ಯಮಂತ್ರಿಯಾಗಿದ್ದಾಗ ಈ ಅತಿಥಿಗೃಹದ ಹಿಂಭಾಗದ ಸ್ಥಳದಲ್ಲಿ 200 ಕೋಟಿ ವೆಚ್ಚದಲ್ಲಿ ಹೋಟೆಲ್‌ನ್ನು ನಿರ್ಮಿಸಿದರು. ಈ ಹೋಟೆಲ್ ಅತಿಥಿಗೃಹಕ್ಕೆ ಅಂಟಿಕೊಂಡಿಯೇ ಇದೆ. ರಾಮಕೃಷ್ಣ ಹೆಗಡೆ ಮತ್ತು ಸಿದ್ದರಾಮಣ್ಣ ಈ ಪಾರಂಪರಿಕ ಕಟ್ಟಡದ ಮೇಲೆ ದಾಳಿ ಮಾಡಿದಂತಾಗುವುದಿಲ್ಲವೆ? ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ನಿರ್ಮಿಸಿದಾಗ ವಿಧಾನಸೌಧದ ನಾಲ್ಕು ದಿಕ್ಕಿನಲ್ಲೂ "ಧರ್ಮವನ್ನು ರಕ್ಷಿಪನ ಧರ್ಮ ರಕ್ಷಿಪುದು" ಎಂಬ ಲೋಕವಾಣಿಯನ್ನು ನಿಜಲಿಂಗಪ್ಪ ಮುಖ್ಯಮಂತ್ರಿಯಾಗಿದ್ದಾಗ ಮುಚ್ಚಿಸಿದರು. ಆಗ ಶ್ರೀ ವಾಟಾಳ್ ನಾಗರಾಜರಾಗಲಿ, ಬಿಜೆಪಿ ಮುಖಂಡರಾಗಲಿ ಯಾಕೆ ಪ್ರಶ್ನಿಸಿ ಪ್ರತಿಭಟಿಸಲಿಲ್ಲ?

ನಿತ್ಯ ಪಂಚಾಂಗ 25.11.2026 ಬುಧವಾರ



ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯನ ಶರದ್ ಋತು/ ಚಾಂದ್ರಮಾನ ಆಶ್ವಯುಜ-ಕಾರ್ತಿಕ ಮಾಸ

ಕಾರ್ತಿಕ ಬಹುಳ, ಪಾಡ್ಯ, ರೋಹಿಣಿ ನಕ್ಷತ್ರ,

ಹುತ್ತರಿ, ಹಜಮಾಡಿ ಲಕ್ಷ್ಮೀನಾರಾಯಣ, ನೆಲ್ಲೂರು ಬಸದಿದೀಪೋತ್ಸವ, ನಂಜನಗೂಡು ರಥ, ಯೋಗಾಭ್ಯನವ ನೃಸಿಂಹ ಆರಾಧನೆ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 – 12.00
ಗುರು	1.30 – 3.00	6.00 – 7.30	9.00 – 10.30
ಶುಕ್ರ	10.30 – 12.00	3.00 – 4.30	7.30 – 9.00
ಶನಿ	9.00 – 10.30	1.30 – 3.00	6.00 – 7.30

ಅಭಿವೃದ್ಧಿ–ಜನರ ಸಮಸ್ಯೆಗೆ ಪರಿಹಾರ ಒದಗಿಸುವ ವೇದಿಕೆಯಾಗಲಿದೆ ಬೆಳಗಾವಿ ಅಧಿವೇಶನ

ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ್ ವಿಶ್ವಾಸ, ಈಗಾಗಲೇ 839 ಪ್ರಶ್ನೆಗಳು ಸ್ವೀಕಾರ

ಮಂಗಳೂರು, ನ.24: ಡಿಸೆಂಬರ್ 2ರಿಂದ 11ರವರೆಗೆ ಒಟ್ಟು ಒಂಬತ್ತು ದಿನಗಳ ಕಾಲ ಬೆಳಗಾವಿಯಲ್ಲಿ ನಡೆಯಲಿರುವ ರಾಜ್ಯ ವಿಧಾನಮಂಡಲದ ಚಳಿಗಾಲದ ಅಧಿವೇಶನವು ರಾಜ್ಯದ ಅಭಿವೃದ್ಧಿ ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವೇದಿಕೆಯಾಗಲಿದೆ ಎಂದು ವಿಧಾನಪರಿಷತ್ ಸಭಾಪತಿ ಸಲೀಂ ಅಹಮದ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದ ಸರ್ಕ್ಯೂಟ್ ಹೌಸ್‌ನಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೆಳಗಾವಿ ಅಧಿವೇಶನದ ವಿಧಾನಪರಿಷತ್ತಿನಲ್ಲಿ ಈಗಾಗಲೇ ಒಟ್ಟು 839 ಪ್ರಶ್ನೆಗಳು ಸ್ವೀಕಾರವಾಗಿದ್ದು, ಇದರಲ್ಲಿ 60 ಚುಕ್ಕೆ ಗುರುತಿನ ಹಾಗೂ 779 ಚುಕ್ಕೆ ರಹಿತ ಪ್ರಶ್ನೆಗಳಿವೆ. ಇದರೊಂದಿಗೆ ನಿಯಮ 72ರ ಅಡಿಯಲ್ಲಿ 22 ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ಅಡಿಯಲ್ಲಿ 17 ಸೂಚನೆಗಳನ್ನು ಅಂಗೀಕರಿಸ ಲಾಗಿದೆ ಎಂದರು. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವುದರಿಂದ ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ಸಮಯಾವಕಾಶ ನೀಡಲಾಗುವುದು. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಸಮಸ್ಯೆಗಳ ಕುರಿತು ಚರ್ಚಿಸಲು ಅವಕಾಶ ಕಲ್ಪಿಸಲಾಗುವುದು. ರಾಜ್ಯದ ವಿಶೇಷಚೇತನರ ಸಮಸ್ಯೆ, ಶಿಕ್ಷಕರ ಕೊರತೆ ಹಾಗೂ ಸವಲತ್ತು, ಆಶಾ ಕಾರ್ಯಕರ್ತೆಯರ ಬೇಡಿಕೆ, ಕಬ್ಬು ಬೆಳೆಗಾರರ ಸಮಸ್ಯೆ, ಬರ ಹಾಗೂ ಕಾರ್ಮಿಕರ ಸಮಸ್ಯೆಗಳ ಮೇಲೂ ಬೆಳಕು ಚೆಲ್ಲಲಾಗುವುದು ಎಂದರು.



ಮತಾಂತರ ನಿಷೇಧ ಕಾಯ್ದೆ ಮತ್ತು ಗೋಹತ್ಯೆ ನಿಷೇಧ ಕಾಯ್ದೆಗಳ ತಿದ್ದುಪಡಿ ವಿಧೇಯಕಗಳ ಕುರಿತು ಪ್ರತಿಕ್ರಿಯಿಸಿದ ಅವರು, "ಸದ್ಯಕ್ಕೆ ಈ ವಿಧೇಯಕಗಳ ಬಗ್ಗೆ ನಮ್ಮ ಬಳಿ ಯಾವುದೇ ಮಾಹಿತಿ ಇಲ್ಲ. ಸಚಿವ ಸಂಪುಟದಲ್ಲಿ ತೀರ್ಮಾನವಾಗಿ, ವಿಧಾನಸಭೆಯಲ್ಲಿ ಮಂಡನೆಯಾದ ಬಳಿಕವಷ್ಟೇ ಅದು ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ" ಎಂದರು.

ಕರ್ನಾಟಕದ ಒಂದು ಕಡೆ ಜಪಾನ್ ಮಾದರಿ ರೈಲು ನಿಲ್ದಾಣ ನಿರ್ಮಿಸುವ ಅಭಿಲಾಷೆ: ಸಿಎಂ ಡಿ.ಕೆ. ಶಿವಕುಮಾರ್

ಜಪಾನ್‌ನ ರೈಲ್ವೆ ನಿಲ್ದಾಣಗಳ ಸ್ವಚ್ಛತೆ, ವೇಗ, ಸಮಯಪಾಲನೆಗೆ ಮೆಚ್ಚುಗೆ

ಜಪಾನ್, ನ.24: ಕರ್ನಾಟಕದಲ್ಲಿಯೂ ಜಪಾನ್ ಮಾದರಿಯ ಅತ್ಯಾಧುನಿಕ ರೈಲ್ವೆ ನಿಲ್ದಾಣವನ್ನು ನಿರ್ಮಿಸುವ ಪ್ರಯತ್ನ ಮಾಡಬೇಕು ಎಂಬ ಅಭಿಲಾಷೆ ಹೊಂದಿರುವುದಾಗಿ" ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಪಾನ್‌ನಲ್ಲಿ ರೈಲ್ವೆ ಪ್ರಯಾಣದ ಅನುಭವವನ್ನು ವಿಡಿಯೋ ಮೂಲಕ ಹಂಚಿಕೊಂಡಿರುವ ಸಿಎಂ ಅವರು, ಅಲ್ಲಿನ ರೈಲ್ವೆ ನಿಲ್ದಾಣಗಳ ಸ್ವಚ್ಛತೆ, ಆಧುನಿಕ ಸೌಲಭ್ಯಗಳು, ರೈಲುಗಳ ವೇಗ ಹಾಗೂ ಸಮಯಪಾಲನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

"ಜಪಾನ್‌ನಲ್ಲಿರುವ ರೈಲ್ವೆ ನಿಲ್ದಾಣಗಳನ್ನು ನೋಡಿದಾಗ ವಿಶೇಷ ಅನುಭವವಾಗುತ್ತದೆ. ಪ್ರತಿಯೊಂದು ರೈಲ್ವೆ ನಿಲ್ದಾಣದಲ್ಲಿಯೂ ಕೆಳಭಾಗ ಮತ್ತು ಮೇಲ್ಭಾಗದಲ್ಲಿ ದೊಡ್ಡ ದೊಡ್ಡ ಶಾಪಿಂಗ್ ಸೆಂಟರ್‌ಗಳು, ಪಂಚತಾರಾ ಹೋಟೆಲ್‌ಗಳಿವೆ. ವಿಮಾನ ನಿಲ್ದಾಣಗಳನ್ನು ಹೇಗೆ ಸ್ವಚ್ಛವಾಗಿ ನಿರ್ವಹಿಸುತ್ತಾರೋ ಅದೇ ರೀತಿ ರೈಲುಗಳು ಮತ್ತು ರೈಲ್ವೆ ನಿಲ್ದಾಣಗಳನ್ನು ಅತ್ಯಂತ ಸ್ವಚ್ಛವಾಗಿ ಇಟ್ಟುಕೊಂಡಿದ್ದಾರೆ. ಇಂತಹ ಮಾದರಿಯನ್ನು ನಮ್ಮ ಕರ್ನಾಟಕದಲ್ಲಿಯೂ ಕನಿಷ್ಠ ಒಂದು ಕಡೆ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಬೇಕು ಎಂಬ ಆಸೆ ಇದೆ" ಎಂದು ಹೇಳಿದರು.

"ಇಲ್ಲಿನ ರೈಲುಗಳ ವೇಗ, ಸ್ವಚ್ಛತೆ ಮತ್ತು ಪ್ರಯಾಣಿಕರಿಗೆ ಕಲ್ಪಿಸಿರುವ ಸೌಲಭ್ಯಗಳು ಅದ್ಭುತವಾಗಿವೆ. ವಿಮಾನ ಪ್ರಯಾಣದಲ್ಲಿ ಸಿಗುವ ಸೌಲಭ್ಯಗಳಿಗಿಂತಲೂ ಉತ್ತಮವಾದ ಸ್ವಚ್ಛತೆಯನ್ನು ರೈಲ್ವೆ ವ್ಯವಸ್ಥೆಯಲ್ಲಿ ಕಾಯ್ದುಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಒಂದು ನಿಮಿಷವೂ ವ್ಯತ್ಯಯವಾಗದಂತೆ ರೈಲುಗಳ ಆಗಮನ ಮತ್ತು ನಿರ್ಗಮನದ ಸಮಯವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ನಿಗದಿತ ಸಮಯಕ್ಕೆ ರೈಲುಗಳು ಸಂಚರಿಸುತ್ತವೆ.



ಇಲ್ಲಿನ ವಿವಿಧ ರೈಲ್ವೆ ನಿಲ್ದಾಣಗಳು ಮತ್ತು ಪ್ಲಾಟ್‌ಫಾರ್ಮ್‌ಗಳನ್ನು ವೀಕ್ಷಿಸುವ ಅವಕಾಶವೂ ಸಿಕ್ಕಿದೆ" ಎಂದರು.

"ಇಂತಹ ಅನೇಕ ಹೊಸ ಪ್ರಯತ್ನಗಳಿಗೆ ನಾವು ಕೈಹಾಕಬೇಕು. ನಮ್ಮ ದೇಶವೂ ಅಭಿವೃದ್ಧಿಯ ಹಾದಿಯಲ್ಲಿ ಇನ್ನಷ್ಟು ವೇಗವಾಗಿ ಮುನ್ನಡೆಯಲು ಇಂತಹ ಅತ್ಯುತ್ತಮ ಮಾದರಿಗಳನ್ನು ಅಳವಡಿಸಿಕೊಳ್ಳುವ ಕೆಲಸ ಮಾಡಬೇಕಿದೆ. ಜಪಾನ್ ಪ್ರವಾಸ ನನ್ನ ಜೀವನದಲ್ಲಿ ಹೊಸ ಅನುಭವ ನೀಡಿದೆ" ಎಂದು ವಿಡಿಯೋದಲ್ಲಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಕ್ಯಾನ್ಸರ್‌ಪೀಡಿತ ಬಾಲಕಿಗೆ ಧೈರ್ಯ ತುಂಬಿದ ಸಿಎಂ

ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ 5ನೇ ತರಗತಿಯ ವಿದ್ಯಾರ್ಥಿನಿ ಯೋಗಿತಾ ಕ್ಯಾನ್ಸರ್‌ನಿಂದ ಬಳಲುತ್ತಿರುವ ವಿಷಯ ತಿಳಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಜಪಾನ್ ಪ್ರವಾಸದಲ್ಲಿದ್ದಾಗಲೇ ವಿಡಿಯೋ ಕರೆ ಮೂಲಕ ಬಾಲಕಿ ಹಾಗೂ ಆಕೆಯ ಪೋಷಕರೊಂದಿಗೆ ಮಾತನಾಡಿ ಧೈರ್ಯ ತುಂಬಿದರು. ಈ ವೇಳೆ ಯಾವುದೇ ಕಾರಣಕ್ಕೂ ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಜಗತ್ತಿನಲ್ಲಿ ಅಸಾಧ್ಯವಾದದ್ದು ಯಾವುದೂ ಇಲ್ಲ. ಈ ಕಷ್ಟದ ಸಮಯದಲ್ಲಿ ನಿಮ್ಮೊಂದಿಗೆ ನಾವಿದ್ದೇವೆ. ಎಲ್ಲವೂ ಒಳ್ಳೆಯದಾಗಲಿದೆ, ಭಗವಂತ ಇದ್ದಾನೆ ಎಂದು ಸಾಂತ್ವನ ಹೇಳಿದರು. ಜೊತೆಗೆ ತಮ್ಮನ್ನು ಭೇಟಿಯಾಗಬೇಕೆಂಬ ಯೋಗಿತಾಳ ಆಸೆಗೆ ಸ್ಪಂದಿಸಿದ ಮುಖ್ಯಮಂತ್ರಿಗಳು, ಜಪಾನ್ ಪ್ರವಾಸದಿಂದ ಮರಳಿ ಬಂದ ಬಳಿಕ ತಪ್ಪದೇ ಭೇಟಿ ಮಾಡುವುದಾಗಿ ಭರವಸೆಯನ್ನು ನೀಡಿದರು.

ರಾಜ-ಮಹಾರಾಜ ಎಂದು ನಾನೆಲ್ಲೂ ಹೇಳಿಕೊಂಡಿಲ್ಲ: ಜನಪ್ರತಿನಿಧಿಯಾಗಿ ಕೆಲಸ ಮಾಡುವುದರಲ್ಲಿ ಹೆಮ್ಮೆಯಿದೆ

ಕಾಂಗ್ರೆಸ್ ನಾಯಕರಿಗೆ ಸಂಸದ ಯದುವೀರ್ ಒಡೆಯರ್ ತಿರುಗೇಟು



ಮಡಿಕೇರಿ, ನ.24: ರಾಜಮನೆತನದ ಹಿನ್ನೆಲೆಯನ್ನು ಮುಂದಿಟ್ಟುಕೊಂಡು ತಮ್ಮನ್ನು ಟೀಕಿಸುತ್ತಿರುವ ಕಾಂಗ್ರೆಸ್ ನಾಯಕರಿಗೆ ಕೊಡಗು–ಮೈಸೂರು ಸಂಸದ ಯದುವೀರ್ ಒಡೆಯರ್ ಖಡಕ್ ತಿರುಗೇಟು ನೀಡಿದ್ದಾರೆ.

ನಾನು ಎಲ್ಲಿಯೂ ನನ್ನನ್ನು ರಾಜ ಅಥವಾ ಮಹಾರಾಜ ಎಂದು ಕರೆದುಕೊಂಡಿಲ್ಲ. ಜನರು ಆಯ್ಕೆ ಮಾಡಿ ಸಂಸತ್‌ಗೆ ಕಳುಹಿಸಿದ್ದಾರೆ. ಅವರ ಪ್ರತಿನಿಧಿಯಾಗಿ ಕೆಲಸ ಮಾಡುವುದೇ ಹೆಮ್ಮೆ ಎಂದು ಹೇಳಿದ್ದಾರೆ.

ಕೊಡಗಿನ ಸೋಮವಾರ ಪೇಟೆಯಲ್ಲಿ ನಡೆದ ಕಾರ್ಯಕ್ರಮದ ವೇಳೆ ತಮ್ಮ ರಾಜಮನೆತನದ ಹಿನ್ನೆಲೆಯ ವಿಚಾರದಲ್ಲಿ ಕಾಂಗ್ರೆಸ್ ಮಾಡುತ್ತಿರುವ ಟೀಕೆಗಳಿಗೆ ಪ್ರತಿಕ್ರಿಯಿಸಿದ ಅವರು, ಕನ್ನಡಿಗನಾಗಿ ಜನರ ಪರವಾಗಿ ಕೆಲಸ ಮಾಡುವುದು ತಮ್ಮ ಆದ್ಯತೆ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ ರಾಜ್ಯ ಸರ್ಕಾರದ ಆಡಳಿತದ ವಿರುದ್ಧವೂ ಅಸಮಾಧಾನ ಹೊರಹಾಕಿದರು. ಕಾಂಗ್ರೆಸ್‌ನ ಐದು ಗ್ಯಾರಂಟಿ ಯೋಜನೆಗಳ ಕುರಿತು ಪ್ರಶ್ನೆ ಎತ್ತಿದ ಅವರು, ಜನರಿಗೆ ಒಂದು ಕೈಯಲ್ಲಿ ಸೌಲಭ್ಯ ನೀಡಿ ಮತ್ತೊಂದು ಕೈಯಲ್ಲಿ ಹೊರೆ ಹಾಕಲಾಗುತ್ತಿದೆ ಎಂದು ಆರೋಪಿಸಿದರು.

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಸೌಲಭ್ಯ ನೀಡಿರುವ ಸರ್ಕಾರ, ಪುರುಷರ ಬಸ್ ಟಿಕೆಟ್ ದರವನ್ನು ಹೆಚ್ಚಿಸಿದೆ. ಯುವನಿಧಿ ಯೋಜನೆ ಏನಾಗಿದೆ ಎಂಬುದಕ್ಕೂ ಉತ್ತರ ನೀಡಬೇಕು. ಯೋಜನೆಗಳನ್ನು ಘೋಷಿಸುವುದಕ್ಕಿಂತ ಅವುಗಳ ಅನುಷ್ಠಾನಕ್ಕೆ ಸರ್ಕಾರ ಆದ್ಯತೆ ನೀಡಬೇಕು ಎಂದರು.

ರಾಜ್ಯದಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸುವ ಬದಲು ಕಾಂಗ್ರೆಸ್ ನಾಯಕರು ರಾಹುಲ್ ಗಾಂಧಿ ಅವರಿಗೆ ಬಿರುದು ನೀಡುವ ವಿಚಾರದಲ್ಲಿ ತೊಡಗಿದ್ದಾರೆ ಎಂದು ಟೀಕಿಸಿದ ಯದುವೀರ್, ರಾಜಕೀಯ ನಾಯಕತ್ವದ ಚರ್ಚೆಗಿಂತ ಅಭಿವೃದ್ಧಿ ವಿಚಾರಗಳಿಗೆ ಹೆಚ್ಚು ಮಹತ್ವ ನೀಡಬೇಕು ಎಂದು ಹೇಳಿದರು.ಕೇಂದ್ರ ಸರ್ಕಾರದ ವಿರುದ್ಧ ಆರೋಪಗಳನ್ನು ಮಾಡುವುದರಲ್ಲೇ ಕಾಲ ಕಳೆಯದೆ, ಕರ್ನಾಟಕಕ್ಕೆ ಬರಬೇಕಾದ ಅನುದಾನಕ್ಕಾಗಿ ರಾಜ್ಯ ಸರ್ಕಾರ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು. 16ನೇ ಹಣಕಾಸು ಆಯೋಗದ ಮುಂದೆ ರಾಜ್ಯದ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಮಂಡಿಸಿ ಹೆಚ್ಚಿನ ಅನುದಾನ ಪಡೆಯುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕು ಎಂದು ಯದುವೀರ್ ಒತ್ತಾಯಿಸಿದರು.

ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವ ಮೊದಲು ತಮ್ಮದೇ ಪಕ್ಷದ ನಾಯಕರ ಬಗ್ಗೆ ತಿಳಿಯಲಿ

ರಾಜನಾಥಸಿಂಗ್ ಕಲಬುರಗಿ ಭೇಟಿ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ



ಕಲಬುರಗಿ, ನ.24: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 5,994 ಮತದಾರರ ಹೆಸರನ್ನು ಅಕ್ರಮವಾಗಿ ಕೈಬಿಟ್ಟಿರುವ ಆರೋಪದ ಕುರಿತು ಬಿಜೆಪಿ ನಾಯಕರು ಜನರಿಗೆ ಉತ್ತರ ನೀಡಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಒತ್ತಾಯಿಸಿದ್ದಾರೆ.

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಕಲಬುರಗಿಗೆ ಭೇಟಿ ನೀಡುತ್ತಿರುವ ಬೆನ್ನಲ್ಲೇ ತಮ್ಮ ಎಕ್ಸ್ ಖಾತೆಯಲ್ಲಿ ವಾಗ್ದಾಳಿ ನಡೆಸಿದ್ದಾರೆ.

ರಾಜನಾಥ್ ಸಿಂಗ್ ಅವರು ಕಲಬುರಗಿಗೆ ಭೇಟಿ ನೀಡಿ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಲಿದ್ದಾರೆ. ಆದರೆ, ಕಲಬುರಗಿಯಲ್ಲೇ ಪ್ರಜಾಪ್ರಭುತ್ವಕ್ಕೆ ಧಕ್ಕೆ ತಂದ ಆರೋಪ ಎದುರಿಸುತ್ತಿರುವ ತಮ್ಮದೇ ಪಕ್ಷದ ನಾಯಕರ ಬಗ್ಗೆ ಮೊದಲು ಅವರಿಗೆ ಮಾಹಿತಿ ನೀಡಬೇಕು ಎಂದಿದ್ದಾರೆ. ಆಳಂದ ಮತಗಳ್ಳತನ ಪ್ರಕರಣದಲ್ಲಿ ಜಿಲ್ಲೆಯ ಮಾಜಿ ಬಿಜೆಪಿ ಶಾಸಕ ಮತ್ತು ಅವರ ಪುತ್ರನನ್ನು ಕ್ರಮವಾಗಿ ಮೊದಲ ಮತ್ತು ಎರಡನೇ ಆರೋಪಿಗಳೆಂದು ಹೆಸರಿಸಲಾಗಿದೆ. .ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯಲ್ಲಿ ಡಿಜಿಟಲ್ ದಾಖಲೆಗಳು, ವಶಪಡಿಸಿಕೊಂಡ ಎಲೆಕ್ಟ್ರಾನಿಕ್ ಸಾಧನಗಳು, ಹಣಕಾಸಿನ ವ್ಯವಹಾರ, ಪಾವತಿ ವಿವರ ಹಾಗೂ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ದಾಖಲೆಗಳನ್ನು ಸುಡುತ್ತಿರುವುದನ್ನು ತೋರಿಸುತ್ತದೆ ಎನ್ನಲಾದ ಸಿಸಿಟಿವಿ ದೃಶ್ಯಾವಳಿ ಪತ್ತೆಯಾಗಿವೆ ಎಂದೂ ತಿಳಿಸಿದ್ದಾರೆ.

ಸಾವಿರಾರು ಅರ್ಹ ಮತದಾರರನ್ನು ಮತದಾನದ ಹಕ್ಕಿನಿಂದ ವಂಚಿಸುವ ಸಂಘಟಿತ ಪ್ರಯತ್ನ ನಡೆದಿದೆ ಎಂಬುದು ತಮ್ಮ ಆರೋಪವಾಗಿದ್ದು, ಈ ಕುರಿತು ಆರೋಪಪಟ್ಟಿಯಲ್ಲಿ ದಾಖಲಿಸಿರುವ ಸಾಕ್ಷ್ಯಗಳಿಗೆ ಬಿಜೆಪಿ ಉತ್ತರ ನೀಡಬೇಕು ಎಂದು ಪ್ರಿಯಾಂಕ್ ಖರ್ಗೆ ಒತ್ತಾಯಿಸಿದ್ದಾರೆ.

ಕಲಬುರಗಿಯಲ್ಲಿ ನಡೆಯುವ ಕಾರ್ಯಕ್ರಮದ ವೇದಿಕೆಯನ್ನು ಬಳಸಿಕೊಂಡು ಆಳಂದ ಪ್ರಕರಣದಲ್ಲಿ ತಮ್ಮ ಪಕ್ಷದ ನಾಯಕರ ವಿರುದ್ಧ ಕೇಳಿಬಂದಿರುವ ಆರೋಪಗಳಿಗೆ ರಾಜನಾಥ್ ಸಿಂಗ್ ಉತ್ತರ ನೀಡುತ್ತಾರೆ ಎಂದು ಆಶಿಸುವುದಾಗಿ ತಿಳಿಸಿದ್ದಾರೆ.

ಬೆಳಗಾವಿ ಅಧಿವೇಶನವೋ?, ಬೆಂಗಳೂರು ಜಾತ್ರೆಯೋ?

ಯಾವುದರಲ್ಲಿ ಭಾಗವಹಿಸಬೇಕು: ಸಚಿವ ಕೃಷ್ಣ ಬೈರೇಗೌಡರಿಗೆ ಶಾಸಕ ಸುರೇಶ್‌ಕುಮಾರ್ ಪ್ರಶ್ನೆ



ಬೆಂಗಳೂರು, ನ.24: ಬೆಳಗಾವಿ ವಿಧಾನಮಂಡಲ ಚಳಿಗಾಲದ ಅಧಿವೇಶನ ಹಾಗೂ 'ಬೆಂಗಳೂರು ಜಾತ್ರೆ' ಎರಡೂ ಒಂದೇ ಸಮಯದಲ್ಲಿ ನಿಗದಿಯಾಗಿರುವ ಕುರಿತು ಮಾಜಿ ಸಚಿವ ಎಸ್. ಸುರೇಶ್ ಕುಮಾರ್ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಪ್ರಶ್ನೆ ಮುಂದಿಟ್ಟಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಡಿಸೆಂಬರ್ 4ರಿಂದ ಡಿ.13ರವರೆಗೆ ಹತ್ತು ದಿನ 20 ಕೋಟಿ ರೂ. ಅಂದಾಜು ವೆಚ್ಚದಲ್ಲಿ 'ಬೆಂಗಳೂರು ಜಾತ್ರೆ' ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಈ ಕಾರ್ಯಕ್ರಮದ ಮಹತ್ವದ ಕುರಿತು ನನ್ನ ಅಭಿಪ್ರಾಯ ಬೇರೆಯೇ ಇದೆ, ಅದನ್ನು ನಂತರ ವಿವರಿಸುತ್ತೇನೆ. ಆದರೆ, ನನ್ನದೊಂದು ಪ್ರಾಮಾಣಿಕ ಪ್ರಶ್ನೆ ಸಚಿವರ ಬಳಿ ಇದೆ. ಅದೇನೆಂದರೆ ಅಧಿವೇಶನ ಮತ್ತು ಜಾತ್ರೆಯ ದಿನಾಂಕಗಳ ಗೊಂದಲ. ಬೆಳಗಾವಿಯಲ್ಲಿ ಡಿಸೆಂಬರ್ 2 ರಿಂದ ಡಿಸೆಂಬರ್ 11 ರವರೆಗೆ ವಿಧಾನಮಂಡಲದ ಚಳಿಗಾಲದ ಅಧಿವೇಶನ ನಡೆಯಲಿದೆ. ವಿಶೇಷವೆಂದರೆ, ಈ ಬಾರಿಯ ಚಳಿಗಾಲದ ಅಧಿವೇಶನದಲ್ಲಿ ಶನಿವಾರವೂ ಸದನದ ಕಲಾಪ ನಡೆಯಲಿದೆ ಎಂದು ಸುರೇಶ್ ಕುಮಾರ್ ಗಮನ ಸೆಳೆದಿದ್ದಾರೆ. ಸಚಿವ ಕೃಷ್ಣ ಬೈರೇಗೌಡರು ಬೆಂಗಳೂರಿನ ಶಾಸಕರೂ ಹೌದು, ಜೊತೆಗೆ ರಾಜ್ಯದ ಸಂಸದೀಯ ವ್ಯವಹಾರಗಳ ಸಚಿವರೂ ಹೌದು. ಹೀಗಿರುವಾಗ ಸಚಿವರೂ ಸೇರಿ ಬೆಂಗಳೂರಿನ ಶಾಸಕರೂ ಆಗಿದ್ದಾರೆ. ಒಂದೇ ಸಮಯದಲ್ಲಿ ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಭಾಗವಹಿಸಬೇಕೋ ಅಥವಾ ಬೆಂಗಳೂರಿನಲ್ಲಿ ನಡೆಯುವ 'ಬೆಂಗಳೂರು ಜಾತ್ರೆ'ಯಲ್ಲಿ ಪಾಲ್ಗೊಳ್ಳಬೇಕೋ" ಎಂದು ಪ್ರಶ್ನಿಸಿದ್ದಾರೆ.

ಬೆಂಗಳೂರಿನ ಶಾಸಕರಿಗೆ ಈ ಎರಡರಲ್ಲಿ ಯಾವ ಕಾರ್ಯ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಯಾವ ರೀತಿಯ ವಿನಾಯಿತಿ ಇದೆ. ಈ ಕುರಿತು ಯಾರು ಸ್ಪಷ್ಟನೆ ನೀಡಬೇಕು ಎಂದು ಎಸ್. ಸುರೇಶ್ ಕುಮಾರ್ ಕೇಳಿದ್ದಾರೆ.

ಕನಕಶ್ರೀ ಪ್ರಶಸ್ತಿಗೆ ಎಚ್.ದಂಡಪ್ಪ ಆಯ್ಕೆ

ಬೆಂಗಳೂರು, ನ.24: ಪ್ರಸಕ್ತ ಸಾಲಿನ ಪ್ರತಿಷ್ಠಿತ ಕನಕಶ್ರೀ ಪ್ರಶಸ್ತಿಗೆ ಎಚ್ ದಂಡಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ.

ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಶೈಲಿಯ ಬರವಣಿಗೆಗೆ ಹೆಸರಾದ ಎಚ್ ದಂಡಪ್ಪ ಅವರು ಸಂಶೋಧನೆ ಮತ್ತು ಸೃಜನಶೀಲ ಬರವಣಿಗೆ ಎರಡರಲ್ಲೂ ತೊಡಗಿಸಿಕೊಂಡವರು, ಅನೇಕ ಪ್ರತಿಷ್ಠಿತ ಗೌರವ, ಸನ್ಮಾನಗಳಿಗೆ ಪಾತ್ರರಾಗಿರುವ ಎಚ್ ದಂಡಪ್ಪ ಅವರಿಗೆ ಈ ಸಾಲಿನ ಪ್ರತಿಷ್ಠಿತ ಕನಕಶ್ರೀ ಪ್ರಶಸ್ತಿ ಗಾಗಿ ಆಯ್ಕೆ ಮಾಡಲಾಗಿದೆ, ಡಾ. ಬಂಜಗೆರೆ ಜಯಪ್ರಕಾಶ್ ಅವರ ನೇತೃತ್ವದ ಆಯ್ಕೆ ಸಮಿತಿ ಹೆಚ್

ನಿಮ್ಮ ಸಮಸ್ಯೆಗೆ ಖಂಡಿತವಾಗಿಯೂ ಪರಿಹಾರ ಸಿಗಲಿದೆ

ಪ್ರತಿಭಟನೆ ಕೈಬಿಡುವಂತೆ ಆಶಾ ಕಾರ್ಯಕರ್ತೆಯರಿಗೆ ಸಿಎಂ ಡಿ.ಕೆ. ಶಿವಕುಮಾರ್ ಮನವಿ

ಜಪಾನ್‌ನಿಂದಲೇ ವಿಡಿಯೋ ಕರೆಮಾಡಿ ಪ್ರತಿಭಟನಾಕಾರರೊಂದಿಗೆ ಚರ್ಚೆ

ಜಪಾನ್, ನ.24: ಆಶಾ ಕಾರ್ಯಕರ್ತೆಯರ ಬಗ್ಗೆ ನನಗೆ ವಿಶೇಷ ಕಾಳಜಿ ಇದೆ. ನಿಮ್ಮ ಸಮಸ್ಯೆಗೆ ಖಂಡಿತವಾಗಿಯೂ ಪರಿಹಾರ ಸಿಗಲಿದೆ. ಪ್ರತಿಭಟನೆ ಕೈಬಿಡಿ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಜಪಾನ್‌ನಿಂದಲೇ ಆಶಾ



ಕಾರ್ಯಕರ್ತೆಯರಿಗೆ ಮತ್ತೊಮ್ಮೆ ಮನವಿ ಮಾಡಿದ್ದಾರೆ.

ಜಪಾನ್ ಪ್ರವಾಸದಲ್ಲಿರುವ ಮುಖ್ಯಮಂತ್ರಿಗಳು ರೈಲಿನಲ್ಲಿ ಪ್ರಯಾಣ ಮಾಡುತ್ತಿರುವಾಗಲೇ ವೀಡಿಯೋ ಕರೆಮಾಡಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆತ್ತಿರುವ ಆಶಾ ಕಾರ್ಯಕರ್ತೆಯರ ಮುಖಂಡರೊಂದಿಗೆ ಮಂಗಳವಾರ ಚರ್ಚೆ ನಡೆಸಿದರು. ನಿಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತೇವೆ, ನನ್ನ ಮೇಲೆ ವಿಶ್ವಾಸವಿಡಿ. ನಿಮ್ಮ ಕೋಪ ಬಿಡಿ. ನನ್ನ ಮನವಿ ಒಪ್ಪದೇ ನಿರಶನ ಮುಂದುವರಿಸುತ್ತಿದ್ದೀರಿ. ಇದರಿಂದ ಆಶಾ ಕಾರ್ಯಕರ್ತ ಹೆಣ್ಣುಮಕ್ಕಳಿಗೆ ತೊಂದರೆ ಆಗುತ್ತಿದೆ. ಅತ್ತ ಅಂಗನವಾಡಿ ಕಾರ್ಯಕರ್ತೆಯರು ದೆಹಲಿಗೆ ಹೋಗಲು ತಯಾರಿ ಮಾಡುತ್ತಿದ್ದಾರೆ. ಬೇರೆ ಇಲಾಖೆಗೆ ಸಂಬಂಧಿಸಿದಂತೆ ಬೇರೆ ಬೇಡಿಕೆಗಳಿದ್ದು, ಅಧಿವೇಶನ ಸಂದರ್ಭದಲ್ಲಿ ನಿಮ್ಮ ಬೇಡಿಕೆ ಬಗ್ಗೆ ಆರ್ಥಿಕ ಇಲಾಖೆ ಜತೆ ಚರ್ಚಿಸುವೆ. ನೀವು ಪ್ರತಿಭಟನೆ ಹಿಂಪಡೆಯಿರಿ. ನಿಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತೇವೆ. ನೀವು ಶ್ರಮ ಪಡುತ್ತಿದ್ದು, ನಿಮಗೆ ನ್ಯಾಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಕಾಳಜಿ ತೋರುತ್ತಿರುವ ರಾಜಕೀಯ ನಾಯಕರು ನಿಮ್ಮ ನೆರವಿಗೆ ಬರಲ್ಲ

ನಿಮ್ಮ ಬಗ್ಗೆ ಕಾಳಜಿ ತೋರುತ್ತಿರುವ ರಾಜಕೀಯ ನಾಯಕರು ನಿಮಗೆ ಸಹಾಯ ಮಾಡುವುದಿಲ್ಲ. ಅವರ ರಾಜಕೀಯಕ್ಕೆ ನಿಮ್ಮನ್ನು ಬಳಸಿಕೊಳ್ಳುತ್ತಾರೆ. ನಾನು ಖಂಡಿತವಾಗಿಯೂ ನಿಮ್ಮ ಸಮಸ್ಯೆಗೆ ಪರಿಹಾರ ನೀಡುವ ವಾಗ್ದಾನ ನೀಡುತ್ತಿದ್ದೇವೆ. ನನಗೆ ಅಧಿವೇಶನದವರೆಗೆ ಸಮಯ ಕೊಡಿ. ಪಾಪ ಹೆಣ್ಣುಮಕ್ಕಳಿಗೆ ಹಗಲು-ರಾತ್ರಿ, ಬಿಸಿಲು-ಚಳಿಯಲ್ಲಿ ಪರದಾಡುವುದು ಬೇಡ ಎಂದು ಮನವಿ ಮಾಡಿದ ಡಿ.ಕೆ. ಶಿವಕುಮಾರ್, ಜಪಾನ್ ಪ್ರವಾಸದಿಂದ ಮರಳಿದ ಬಳಿಕ ನಿಮ್ಮನ್ನು ಭೇಟಿ ಮಾಡುವೆ ಎಂದರು.

ಬಿಜೆಪಿ ಬೆಂಬಲಿಸಿದರೆ ಗ್ಯಾರಂಟಿ ಯೋಜನೆಗಳಿಗೆ ಕತ್ತರಿ

ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಮಾತನಾಡಿದ ಸಚಿವ ಶಿವರಾಜ್ ತಂಗಡಗಿ, ಮುಂದಿನ ಚುನಾವಣೆಯಲ್ಲಿ ಮತದಾರರು ಬಿಜೆಪಿಯನ್ನು ಬೆಂಬಲಿಸಿದರೆ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ನಿಂತುಹೋಗಲಿವೆ. ಸದ್ಯ ಮಹಿಳೆಯರು ಉಚಿತ ಬಸ್ ಸೌಲಭ್ಯದ ಮೂಲಕ ತವರು ಮನೆ, ನೆಂಟರ ಮನೆ ಹಾಗೂ ದೇವಸ್ಥಾನಗಳಿಗೆ ಸುಗಮವಾಗಿ ಓಡಾಡುತ್ತಿದ್ದು, ಬಿಜೆಪಿ ಅಧಿಕಾರಕ್ಕೆ ಬಂದರೆ ಈ ಎಲ್ಲಾ ಸವಲತ್ತುಗಳಿಗೆ ಕತ್ತರಿ ಬೀಳಲಿದೆ. ಮತ ಚಲಾಯಿಸುವ ಮುನ್ನ ಎಚ್ಚರಿಕೆಯಿಂದ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ.



ಜಪಾನ್‌ನ ನಗೋಯಾದಿಂದ ಒಸಾಕಾ ನಗರಕ್ಕೆ ಶಿನ್‌ಕಾನ್‌ಸೆನ್ ಬುಲೆಟ್ ರೈಲಿನಲ್ಲಿ ಪ್ರಯಾಣಿಸುವ ಮುನ್ನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈಲು ನಿಲ್ದಾಣದಲ್ಲಿ ಕನ್ನಡದ ಕುಟುಂಬದೊಂದಿಗೆ ಮಾತುಕತೆ ನಡೆಸಿದರು.

ಪಶುಸಂಗೋಪನಾ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಆದ್ಯತೆ: ಡಿಸಿಎಂ ಪರಮೇಶ್ವರ್

ತುಮಕೂರಿನಲ್ಲಿ ಇಲಾಖೆಯ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ



ತುಮಕೂರು, ನ.24: ಪಶುಸಂಗೋಪನಾ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡುತ್ತಿದ್ದು, ಪಶುಸಂಪತ್ತಿನ ಸಂರಕ್ಷಣೆ ಹಾಗೂ ರೈತರಿಗೆ ಗುಣಮಟ್ಟದ ಪಶುವೈದ್ಯಕೀಯ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದರು.

ನಗರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪಶುಸಂಗೋಪನಾ ಇಲಾಖೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ, ಸುಮಾರು 2 ಕೋಟಿ ರೂ. ವೆಚ್ಚದಲ್ಲಿ ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಇಲಾಖೆಯ ಆಡಳಿತ ಕಚೇರಿ ಹಾಗೂ ಉಪನಿರ್ದೇಶಕರ ಕಚೇರಿಯ ನೂತನ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ, 50 ಲಕ್ಷ ರೂ. ವೆಚ್ಚದಲ್ಲಿ ಸಭಾಂಗಣ ನಿರ್ಮಾಣ ಕಾಮಗಾರಿಗೆ ಚಾಲನೆ, ಬೆಳ್ಳಾವಿ ಮತ್ತು ಅರಕೆರೆಯಲ್ಲಿ ತಲಾ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಪಶು ಆಸ್ಪತ್ರೆಗಳ ನೂತನ ಕಟ್ಟಡಗಳನ್ನು ಉದ್ಘಾಟಿಸಿ, ಹಿರೇಗುಂಡಕಲ್‌ನಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಪಶು ಚಿಕಿತ್ಸಾಲಯ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರು.

ಪಶುವೈದ್ಯಕೀಯ ಸಂಸ್ಥೆಗಳ ಬಲವರ್ಧನೆಗೆ 11 ಕೋಟಿ ಬಿಡುಗಡೆ

ಕೇಂದ್ರ ಸರ್ಕಾರದ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಈಗಾಗಲೇ 120 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಹೆಚ್ಚುವರಿಯಾಗಿ 400 ಫಲಾನುಭವಿಗಳನ್ನು ಆಯ್ಕೆ ಮಾಡಿ ಸಹಾಯಧನ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಿವಿಧ ಯೋಜನೆಗಳಡಿ 11.70 ಕೋಟಿ ಅನುದಾನ ಮಂಜೂರಾಗಿದ್ದು, ಪಶುವೈದ್ಯಕೀಯ ಸಂಸ್ಥೆಗಳ ಬಲವರ್ಧನೆಗೆ 11 ಕೋಟಿ ಬಿಡುಗಡೆ ಮಾಡಲಾಗಿದೆ. ಅನುಗ್ರಹ ಯೋಜನೆಯಡಿ 17 ಕೋಟಿ ಮಂಜೂರಾಗಿದ್ದು, ಈ ಪೈಕಿ 11 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಡಿಸಿಎಂ ಡಾ.ಜಿ. ಪರಮೇಶ್ವರ್ ಮಾಹಿತಿ ನೀಡಿದರು.

ಪಶುಸಂಗೋಪನೆ ಗ್ರಾಮೀಣ ಆರ್ಥಿಕತೆಯ ಭಾಗ

ಪಶುಸಂಗೋಪನೆ ಗ್ರಾಮೀಣ ಆರ್ಥಿಕತೆಯ ಪ್ರಮುಖ ಭಾಗವಾಗಿದೆ. ಮನುಷ್ಯನ ಬದುಕಿನೊಂದಿಗೆ ಪ್ರಾಣಿಗಳ ಬದುಕು ಬೆಸೆದುಕೊಂಡಿದ್ದು, ಅವುಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ತುಮಕೂರು ಜಿಲ್ಲೆಯಲ್ಲಿ ಹಸು, ಎಮ್ಮೆ ಸೇರಿದಂತೆ ಸುಮಾರು 5 ಲಕ್ಷ ಜಾನುವಾರುಗಳಿದ್ದು, 17 ಲಕ್ಷ ಕುರಿ ಮತ್ತು ಮೇಕೆಗಳಿವೆ. ವಿಶೇಷವಾಗಿ ಶಿರಾ, ಪಾವಗಡ, ಮಧುಗಿರಿ ಹಾಗೂ ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ಹೆಚ್ಚಾಗಿದೆ ಎಂದರು.ಕುರಿ ಸಾಕಾಣಿಕೆಯಲ್ಲಿ ತೊಡಗಿದ್ದ ಬಡ್ಡಿ ಈರಣ್ಣ ಎಂಬುವವರು ಒಬ್ಬರೇ ಸುಮಾರು 5 ಸಾವಿರ ಕುರಿಗಳನ್ನು ಸಾಕುತ್ತಿದ್ದರು. ಪಶುಸಂಗೋಪನೆಯು ರೈತರ ಜೀವನೋಪಾಯಕ್ಕೆ ನೆರವಾಗುವುದರ ಜೊತೆಗೆ ಕೃಷಿ ಚಟುವಟಿಕೆಗಳಿಗೂ ಪೂರಕವಾಗಿದೆ. ಕೃಷಿ ಮತ್ತು ಪಶುಸಂಗೋಪನೆ ಪರಸ್ಪರ ಅವಲಂಬಿತವಾಗಿವೆ ಎಂದು ಡಾ.ಜಿ. ಪರಮೇಶ್ವರ್ ಹೇಳಿದರು.

ಹಠ ಬಿಟ್ಟು ಶಾಂತಿಯಿಂದಿರಿ, ಸರ್ಕಾರದಿಂದ ಸಿಹಿ ಸುದ್ದಿ ಸಿಗಲಿದೆ ಆಶಾಕಾರ್ಯಕರ್ತೆಯರಿಗೆ ಸಚಿವ ಯು.ಟಿ. ಖಾದರ್ ವಿನಂತಿ

ಮಂಗಳೂರು, ನ.24: ಹನ್ನೆರಡು ದಿನ ಕಾಯಿರಿ ಸರ್ಕಾರದಿಂದ ಸಿಹಿ ಸುದ್ದಿ ಸಿಗಲಿದೆ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ಹಾಗಾಗಿ ಆಶಾ ಕಾರ್ಯಕರ್ತೆಯರು ಹಠ ಹಿಡಿಯದೆ ಶಾಂತಿಯಿಂದಿರುವಂತೆ ಆರೋಗ್ಯ ಸಚಿವ ಯು.ಟಿ. ಖಾದರ್ ವಿನಂತಿಸಿದ್ದಾರೆ.



ನಗರದಲ್ಲಿ ಮಾತನಾಡಿದ ಅವರು, ಆಶಾ ಕಾರ್ಯಕರ್ತೆಯರು ನಮ್ಮ ಕುಟುಂಬದ ಸದಸ್ಯರಿದ್ದಂತೆ, ಅವರ ಕಷ್ಟ ಅರ್ಥವಾಗುತ್ತದೆ ಆದರೆ ಸುಳ್ಳು ಭರವಸೆ ನೀಡಲು ಸಾಧ್ಯವಿಲ್ಲ. ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ಅಧಿವೇಶನದ ಅಂತ್ಯದೊಳಗೆ ಸಿಹಿ ಸುದ್ದಿ ನೀಡುವುದಾಗಿ ಸಿಎಂ ಹೇಳಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ 12 ದಿನ ಕಾದು ಕೆಲಸಕ್ಕೆ ಹಾಜರಾಗುವಂತೆ ಮನವಿ ಮಾಡಿದರು.

ಕೇಂದ್ರದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಬರುವ ಆಶಾ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರ 2,000 ಹಾಗೂ ಇನ್ಸೆಂಟಿವ್ ನೀಡುತ್ತಿದ್ದರೆ, ರಾಜ್ಯ ಸರ್ಕಾರ 5,000 ಸೇರಿಸಿ ಒಟ್ಟು 8,000 ನೀಡುತ್ತಿದೆ. ರಾಜ್ಯದಲ್ಲಿ ಅಕ್ಷರ ದಾಸೋಹ ಸಿಬ್ಬಂದಿ 4,000ಕ್ಕೆ ಹಾಗೂ ಅತಿಥಿ ಶಿಕ್ಷಕರು 10-12 ಸಾವಿರಕ್ಕೆ ದುಡಿಯುತ್ತಿದ್ದು, ಸರ್ಕಾರ ಎಲ್ಲರನ್ನೂ ಸಮಾನವಾಗಿ ನೋಡಬೇಕಾಗುತ್ತದೆ ಎಂದು ಸಚಿವರು ಅಂಕಿಅಂಶ ಸಹಿತ ವಿವರಿಸಿದರು.

ವಿಜಯೇಂದ್ರ ವಿರುದ್ಧ ಕಿಡಿ

ಬಿಜೆಪಿ ಅಧಿಕಾರದಲ್ಲಿದ್ದಾಗ ಏನೂ ಮಾಡದ ಬಿ.ವೈ. ವಿಜಯೇಂದ್ರ ಈಗ ಟೀಕೆ ಮಾಡುತ್ತಿದ್ದಾರೆ ಎಂದು ಕಿಡಿಕಾರಿದ ಖಾದರ್, ಕೇಂದ್ರದಲ್ಲಿ ಅವರದ್ದೇ ಸರ್ಕಾರವಿದೆ. ವಿಜಯೇಂದ್ರ ಅವರು ಪತ್ರ ಬರೆದು ಎನ್‌ಎಚ್‌ಎಂ ಪ್ರೋತ್ಸಾಹಧನ ಹೆಚ್ಚಿಸಲು ಒತ್ತಾಯಿಸಲಿ ಎಂದು ಆಗ್ರಹಿಸಿದರು. ಕೇಂದ್ರ ಎಷ್ಟು ಮೊತ್ತ ಹೆಚ್ಚಿಸುತ್ತದೋ ಅಷ್ಟೇ ಹಣವನ್ನು ರಾಜ್ಯ ಸರ್ಕಾರವೂ ಮ್ಯಾಚಿಂಗ್ ಗ್ರ್ಯಾಂಟ್ ಆಗಿ ನೀಡಲಿದ್ದು, ಬೇಕಿದ್ದರೆ ಒಟ್ಟಿಗೆ ದೆಹಲಿಗೆ ಹೋಗೋಣ ಎಂದು ಸವಾಲು ಹಾಕಿದರು.

ತುಳು ಅಧಿಕೃತ ಭಾಷೆಯಾಗಿ ಘೋಷಿಸುವ ಪ್ರಕ್ರಿಯೆ ಪ್ರಗತಿಯಲ್ಲಿ

ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯಾಗಿ ಘೋಷಿಸುವ ಪ್ರಕ್ರಿಯೆ ನಡೆದಿದೆ ಎಂದು ಸಚಿವರು ಮಾಹಿತಿ ನೀಡಿದರು. ಮಂಗಳೂರು ಮಹಾನಗರ ಪಾಲಿಕೆಗೆ ಸುಮಾರು 400 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಬೆಂಗ್ರೆ ಸೇತುವೆ ಟೆಂಡರ್ ಮುಗಿದು ಶಂಕುಸ್ಥಾಪನೆಗೆ ಸಿದ್ಧವಾಗಿದೆ. ಮಂಗಳಾ ಸ್ಟೇಡಿಯಂ ಅಭಿವೃದ್ಧಿಗೆ ಹೆಚ್ಚುವರಿ 20 ಕೋಟಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, 16,000 ಕೋಟಿ ಗ್ರಾಮೀಣ ರಸ್ತೆ ಯೋಜನೆಯ ಮೊದಲ ಹಂತ ಜಾರಿಯಾಗಿದೆ. ಅಲ್ಲದೆ, ಬೆಂಗಳೂರಿನ ಡಾಟಾ ಸೆಂಟರ್ ಅನ್ನು ಮಂಗಳೂರಿನ ತಣ್ಣೀರುಬಾವಿಗೆ ಸ್ಥಳಾಂತರಿಸುವ ಕುರಿತು ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಯುತ್ತಿದೆ ಎಂದು ಯು.ಟಿ. ಖಾದರ್ ತಿಳಿಸಿದರು.

112 ಮಿನರಲ್ ವಾಟರ್ ಘಟಕಗಳ ತಪಾಸಣೆ, 12 ಬಂದ್

ದೆಹಲಿಯ ಬಿಸ್ಲೆರಿ ನೀರಿನ ಮಾದರಿಯಲ್ಲಿ ರಾಸಾಯನಿಕ ಅಂಶ ಪತ್ತೆಯಾದ ವಿಚಾರವಾಗಿ ಪ್ರತಿಕ್ರಿಯಿಸಿ, ರಾಜ್ಯಾದ್ಯಂತ 112 ವಾಟರ್ ಪ್ಯೂರಿಫಿಕೇಶನ್ ಮತ್ತು ಮಿನರಲ್ ವಾಟರ್ ಫ್ಯಾಕ್ಟರಿಗಳ ಮೇಲೆ ದಾಳಿ ನಡೆಸಿ ತಪಾಸಣೆ ಮಾಡಲಾಗಿದೆ ಎಂದರು. ಲೋಪದೋಷ ಕಂಡುಬಂದ 12 ಫ್ಯಾಕ್ಟರಿಗಳನ್ನು ಈಗಾಗಲೇ ಬಂದ್ ಮಾಡಲಾಗಿದ್ದು, 60 ಘಟಕಗಳ ನೀರಿನ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಲ್ಯಾಬ್ ವರದಿ ಬಂದ ಬಳಿಕ ಎಷ್ಟೇ ದೊಡ್ಡ ಕಂಪನಿಯಾದರೂ ಮುಲಾಜಿಲ್ಲದೆ ಬಂದ್ ಮಾಡುತ್ತೇವೆ ಹಾಗೂ ಹೊರರಾಜ್ಯದ ಕಲುಷಿತ ಘಟಕಗಳಿಂದ ಕರ್ನಾಟಕಕ್ಕೆ ನೀರು ಪೂರೈಕೆಯಾಗುತ್ತಿದ್ದರೆ ರಾಜ್ಯದಲ್ಲಿ ನಿಷೇಧಿಸುವುದಾಗಿ ಯು.ಟಿ. ಖಾದರ್ ಸ್ಪಷ್ಟಪಡಿಸಿದರು.

ಪರಿಶಿಷ್ಟ ಪಂಗಡದ ಯೋಜನೆಗಳ ಬಗ್ಗೆ ಮಾಹಿತಿಗೆ ವಿಶೇಷ ಆಪ್: ಸಚಿವ ರಘುಮೂರ್ತಿ

ಮೈಸೂರು, ನ.25: ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿವಿಧ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ವ್ಯಕ್ತಿವಾರು ಮಾಹಿತಿ ಕ್ರೋಡೀಕರಿಸಿಕೊಳ್ಳಲು, ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ವಿಶೇಷ ಆಪ್ ಅಭಿವೃದ್ಧಿಪಡಿಸಲಾಗುವುದು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಟಿ. ರಘುಮೂರ್ತಿ ತಿಳಿಸಿದ್ದಾರೆ.

ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಒಂದೇ ಕಡೆ ಎಲ್ಲಾ ಮಾಹಿತಿ ದೊರೆಯುವ ವ್ಯವಸ್ಥೆ ಮಾಡಲು ಎಲ್ಲ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ವಾಲ್ಮೀಕಿ, ನಾಯಕ, ಕಾಡು ಕುರುಬ, ಜೇನು ಕುರುಬ, ಸೋಲಿಗ, ಹಕ್ಕಿಪಿಕ್ಕಿ ಸೇರಿದಂತೆ ಎಸ್‌ಟಿ ಪಂಗಡದಲ್ಲಿರುವ 50ಕ್ಕೂ ಹೆಚ್ಚು ಉಪಜಾತಿಗಳವರಿಗೆ ವಿವಿಧ ಯೋಜನೆಗಳು ಜಾರಿಯಲ್ಲಿವೆ. ಆ ಎಲ್ಲ ಮಾಹಿತಿ ಈಗ ಆಪ್ ಮೂಲಕ ಬೆರಳು ತುದಿಯಲ್ಲೇ ಸಿಗಲಿದೆ ಎಂದಿದ್ದಾರೆ.

ಈಗಾಗಲೇ ಯುವ ಸಮುದಾಯದ ಉದ್ಯೋಗ ಸಮಸ್ಯೆ ಪರಿಹರಿಸಲು ಪರಿಶಿಷ್ಟ ಪಂಗಡದವರಿಗೆ ಫುಡ್ ಕಿಯೋಸ್ಕ್ ಪಡೆಯಲು ಅವಕಾಶ ಕಲ್ಪಿಸಲಾಗಿದೆ, ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪಿಸಲಾಗುತ್ತಿದೆ, ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆಗೂ ನಮ್ಮ ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದರು.

ಪರಿಶಿಷ್ಟ ಪಂಗಡ ಕಲ್ಯಾಣ ಸಚಿವನಾಗಿ ಕಳೆದ ಕೆಲವು ಕೆಲವು ತಿಂಗಳುಗಳಿಂದ ವಿವಿಧ ಜಿಲ್ಲೆಯಲ್ಲಿನ ಹಲವಾರು ಹಾಡಿಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿ ಮೂಲಸೌಕರ್ಯ ಕೊರತೆ ಇರುವುದು ಕಂಡುಬಂದಿದೆ. ಅವುಗಳನ್ನು ಸರಿಪಡಿಸಲು ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆ.ಆರ್.ಐ.ಡಿ.ಎಲ್ ವತಿಯಿಂದ ಹಾಡಿಗಳಲ್ಲಿ 100 ಮನೆಗಳು ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿದ್ದು, ಇದರಲ್ಲಿ 15 ಮನೆ ಪೂರ್ಣವಾಗಿದ್ದು, ಉಳಿದ 85 ಮನೆಗಳು ವಿವಿಧ ಹಂತದಲ್ಲಿದೆ. ಮನೆ ನಿರ್ಮಾಣ ಮಾಡಲು ಸರ್ಕಾರದ ಹಂತದಲ್ಲಿಅನುದಾನದ ಕೊರತೆ ಇಲ್ಲ. ಅಧಿಕಾರಿಗಳು ವಿಶೇಷ ನಿಗಾ ವಹಿಸಿ ಮನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.ನಿಗಮ ಹಾಗೂ ಇಲಾಖೆಗಳಿಂದ ವೈಯಕ್ತಿಕವಾಗಿ ಬೋರ್ ವೆಲ್ ಕೊರೆಯಲು ಅನುದಾನ ನೀಡಲಾಗುವುದು ಎಂದರು.

ಕ್ವಾಂಟಮ್ ಸಿಟಿಯಲ್ಲಿ ಹೂಡಿಕೆ, ತಂತ್ರಜ್ಞಾನ ಸಹಭಾಗಿತ್ವಕ್ಕೆ ಸ್ವಿಸ್ ಕಂಪನಿಗಳಿಗೆ ಆಹ್ವಾನ

ಜುರಾ ಮತ್ತು ನ್ಯೂಶಾಟೆಲ್ ನಿಯೋಗದೊಂದಿಗೆ ಸಚಿವ ಡಾ. ಅಜಯ್ ಧರ್ಮಸಿಂಗ್ ಚರ್ಚೆ



ಬೆಂಗಳೂರು, ನ.24: ಕರ್ನಾಟಕದ ಪ್ರಸ್ತಾವಿತ ಕ್ವಾಂಟಮ್ ಸಿಟಿಯಲ್ಲಿ ಹೂಡಿಕೆ ಹಾಗೂ ತಂತ್ರಜ್ಞಾನ ಸಹಭಾಗಿತ್ವಕ್ಕೆ ಮುಂದಾಗುವಂತೆ ಸ್ವಿಟ್ಜರ್‌ಲ್ಯಾಂಡ್‌ನ ಕಂಪನಿಗಳು, ಸಂಶೋಧನಾ ಸಂಸ್ಥೆಗಳು ಮತ್ತು ಉದ್ಯಮ ಪ್ರತಿನಿಧಿಗಳಿಗೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಆಹ್ವಾನಿಸಿದರು.

ಬೆಂಗಳೂರಿನ ಸ್ವಿಸ್‌ನೆಕ್ಸ್‌ನಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ಜುರಾ ಮತ್ತು ನ್ಯೂಶಾಟೆಲ್ ಕ್ಯಾಂಟನ್‌ಗಳ ಸಚಿವರು ಹಾಗೂ 30ಕ್ಕೂ ಹೆಚ್ಚು ಉದ್ಯಮ ಪ್ರತಿನಿಧಿಗಳೊಂದಿಗೆ ಆಯೋಜಿಸಿದ್ದ ಔತಣಕೂಟದಲ್ಲಿ ಮಾತನಾಡಿದ ಅವರು, ಪ್ರಿಶಿಷನ್ ಎಂಜಿನಿಯರಿಂಗ್, ಸುಧಾರಿತ ಉತ್ಪಾದನೆ, ಕೈಗಾರಿಕಾ ಸ್ವಯಂಚಾಲನೆ, ವೈದ್ಯಕೀಯ ತಂತ್ರಜ್ಞಾನ ಹಾಗೂ ವಿಶೇಷ ಉತ್ಪಾದನಾ ಕ್ಷೇತ್ರಗಳಲ್ಲಿ ಸಹಭಾಗಿತ್ವ ವಿಸ್ತರಿಸುವ ಅವಕಾಶಗಳಿವೆ ಎಂದರು.

ಸ್ವಿಟ್ಜರ್‌ಲ್

ಪೈಲಟ್ ಕೊರತೆ ತೀವ್ರ: ಕಾರ್ಯಾಚರಿಸುತ್ತಿರುವುದು ಕೇವಲ 270 ಹೆಲಿಕಾಪ್ಟರ್

ನವದೆಹಲಿ, ನ.24: ಭಾರತಕ್ಕೆ ಕನಿಷ್ಠ 1,000 ಹೆಲಿಕಾಪ್ಟರ್‌ಗಳ ಅಗತ್ಯವಿದ್ದರೂ, ಪ್ರಸ್ತುತ ದೇಶದಲ್ಲಿ ಅದರ ನಾಲ್ಕನೇ ಒಂದು ಭಾಗದಷ್ಟು ಅಂದರೆ ಕೇವಲ 270ಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳು ಮಾತ್ರ ಕಾರ್ಯಾಚರಿಸುತ್ತಿವೆ. ಹೆಲಿಕಾಪ್ಟರ್‌ಗಳ ಈ ತೀವ್ರ ಕೊರತೆಯು ತುರ್ತು ವೈದ್ಯಕೀಯ ಸೇವೆಗಳು, ಹೆಲಿ–ಪ್ರವಾಸೋದ್ಯಮ ಹಾಗೂ ಕಾರ್ಪೊರೇಟ್ ಪ್ರಯಾಣದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿರುವುದಾಗಿ ವರದಿಯಾಗಿದೆ. ವಿಶೇಷವಾಗಿ ದುರ್ಗಮ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಅಮೂಲ್ಯ ಜೀವಗಳನ್ನು ಉಳಿಸಲು ನೆರವಾಗುವ ಹೆಲಿಕಾಪ್ಟರ್ ಆಂಬ್ಯುಲೆನ್ಸ್‌ಗಳನ್ನು ನಿಯೋಜಿಸಲು ಈ ಕೊರತೆ ದೊಡ್ಡ ಅಡ್ಡಿಯಾಗಿದೆ. ಅಲ್ಲದೆ, ಹೆಲಿ–ಪ್ರವಾಸೋದ್ಯಮವು ದೊಡ್ಡ ಮಟ್ಟದಲ್ಲಿ ಬೆಳೆಯಲು ಸಾಧ್ಯವಾಗದಿರುವುದಕ್ಕೂ ಮತ್ತು ರಸ್ತೆ ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಕಾರ್ಪೊರೇಟ್ ಸಂಸ್ಥೆಗಳ ಅಧಿಕಾರಿಗಳು ಬಯಸುವ ತ್ವರಿತ ಪ್ರಯಾಣದ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗದೇ ಇರುವುದಕ್ಕೂ ಇದೇ ಪ್ರಮುಖ ಕಾರಣವಾಗಿದೆ. ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳು ನಿರ್ವಹಿಸುತ್ತಿರುವ ಹೆಲಿಕಾಪ್ಟರ್ ಸೇರಿದಂತೆ ದೇಶದಲ್ಲಿ 270ಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳಿವೆ. ಆದರೆ, ನಿರ್ವಹಣಾ ಕಾರ್ಯ, ಬಿಡಿಭಾಗಗಳ ಬದಲಾವಣೆ ಹಾಗೂ ಇತರ ತಾಂತ್ರಿಕ ಕಾರಣಗಳಿಂದ ಕೆಲವು ಹೆಲಿಕಾಪ್ಟರ್‌ಗಳು ಹಾರಾಟ ನಡೆಸಲಾಗುತ್ತಿಲ್ಲ. ಇದರಿಂದ, ಯಾವುದೇ ನಿರ್ದಿಷ್ಟ ಸಮಯದಲ್ಲಿ ಸುಮಾರು 240 ಹೆಲಿಕಾಪ್ಟರ್‌ಗಳು ಮಾತ್ರ ಕಾರ್ಯಾಚರಣೆಗೆ ಲಭ್ಯವಿರುತ್ತವೆ. ಭಾರತದಂತಹ ಬೃಹತ್ ಜನಸಂಖ್ಯೆಯ ದೇಶದ ಅಗತ್ಯಗಳನ್ನು ಪೂರೈಸಲು ಕನಿಷ್ಠ 1,000 ಹೆಲಿಕಾಪ್ಟರ್‌ಗಳ ಅವಶ್ಯಕತೆಯಿದೆ ಎಂದು ಸರ್ಕಾರಿ ಮೂಲಗಳು ಸ್ಪಷ್ಟಪಡಿಸಿವೆ.

ಭಾರತ ಮತ್ತು ಇತರ ದೇಶಗಳ ನಡುವಿನ ವ್ಯತ್ಯಾಸವನ್ನು ಉಲ್ಲೇಖಿಸಿರುವ ಅಧಿಕಾರಿಗಳು, ಬ್ರೆಜಿಲ್‌ನ ಸಾವೊ ಪಾಲೊ ನಗರವೊಂದರಲ್ಲೇ 300ಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳಿದ್ದು, ಅವುಗಳಲ್ಲಿ



ಸುಮಾರು 18%ರಷ್ಟನ್ನು ಆಂಬ್ಯುಲೆನ್ಸ್‌ಗಳಾಗಿ ಬಳಸಲಾಗುತ್ತಿದೆ. ಈ ಹಿಂದೆ ಆರಂಭವಾಗಿದ್ದ ಕೆಲವು ತರಬೇತಿ ಸಂಸ್ಥೆಗಳು ನುರಿತ ಹೆಲಿಕಾಪ್ಟರ್ ತರಬೇತುದಾರರ ಕೊರತೆಯಿಂದಾಗಿ ಮುಚ್ಚಲ್ಪಟ್ಟಿವೆ ಎಂದು ಮತ್ತೊಬ್ಬ ವಾಯುಯಾನ ತಜ್ಞರು ಮಾಹಿತಿ ನೀಡಿರುವುದಾಗಿ ವರದಿಯಾಗಿದೆ. ಭಾರತದ ಹೆಲಿಕಾಪ್ಟರ್ ಉದ್ಯಮಕ್ಕೆ ಅಪಾರ ಸಾಮರ್ಥ್ಯವಿದೆ ಎಂದು ಅಭಿಪ್ರಾಯಪಟ್ಟಿರುವ ಫೆಡರೇಶನ್ ಆಫ್ ಇಂಡಿಯಾ ಪೈಲಟ್ಸ್ ಅಧ್ಯಕ್ಷ ಕ್ಯಾಪ್ಟನ್ ಸಿ.ಎಸ್. ರಾಂಧವಾ, ಇತ್ತೀಚೆಗೆ ಸಂಭವಿಸಿದ ಹಲವು ಹೆಲಿಕಾಪ್ಟರ್ ಅಪಘಾತಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆಲಿಕಾಪ್ಟರ್ ಸುರಕ್ಷತಾ ಚೌಕಟ್ಟು ರೂಪಿಸುವಂತೆ ಪ್ರಧಾನಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಹಿಮಾಲಯದ ರಾಜ್ಯಗಳಲ್ಲಿ ದುರ್ಗಮ ಪ್ರದೇಶಗಳನ್ನು ತಲುಪಲು ಮತ್ತು ತುರ್ತು ನೆರವು ನೀಡಲು ಹೆಲಿಕಾಪ್ಟರ್‌ಗಳೇ ಏಕೈಕ ಪ್ರಾಯೋಗಿಕ ಮಾರ್ಗವಾಗಿದೆ. ಅದೇ ರೀತಿ ಭಾರತದ ಇಂಧನ ಮೂಲಸೌಕರ್ಯಕ್ಕೆ ಕಡಲಾಚೆಯ ಕಾರ್ಯಾಚರಣೆಗಳು ಅತ್ಯಗತ್ಯವಾಗಿವೆ. ಆದ್ದರಿಂದ ಈ ಕಾರ್ಯಾಚರಣೆಗಳನ್ನು ಅತ್ಯುನ್ನತ ಸುರಕ್ಷತಾ ಮಾನದಂಡಗಳು, ವೃತ್ತಿಪರತೆ ಹಾಗೂ ಶಿಸ್ತಿನೊಂದಿಗೆ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಸೇನಾ ಸೇವೆಯಲ್ಲಿ ಶೇ.೨೦ ಪೈಲಟ್‌ಗಳು

ಹೆಲಿಕಾಪ್ಟರ್‌ಗಳ ಕೊರತೆಯ ಜೊತೆಗೆ, ನುರಿತ ಪೈಲಟ್‌ಗಳ ತೀವ್ರ ಅಭಾವವು ಈ ಕ್ಷೇತ್ರದ ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ವಾಯುಯಾನ ಸಲಹೆಗಾರ, ಮಾಜಿ ಹೆಲಿಕಾಪ್ಟರ್ ಪೈಲಟ್ ಕ್ಯಾಪ್ಟನ್ ತೇಜವಂತ್ ಸಿಂಗ್ ರೈಟ್ ತಿಳಿಸಿದ್ದಾರೆ.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪೈಲಟ್‌ಗಳಲ್ಲಿ ಸುಮಾರು 90%ರಷ್ಟು ಮಂದಿ ಭೂಸೇನೆ, ನೌಕಾಪಡೆ, ವಾಯುಪಡೆ ಅಥವಾ ಕರಾವಳಿ ಕಾವಲು ಪಡೆಯಲ್ಲಿ ಸೇವೆ ಸಲ್ಲಿಸಿದ ನಿವೃತ್ತ ಅಧಿಕಾರಿಗಳಾಗಿದ್ದಾರೆ. ಹೆಲಿಕಾಪ್ಟರ್ ಪೈಲಟ್‌ಗಳ ಭಾರೀ ಕೊರತೆಯಿಂದಾಗಿ ಈ ಉದ್ಯಮಕ್ಕೆ ಕಾಲಿಟ್ಟ ಅನೇಕ ಖಾಸಗಿ ಸಂಸ್ಥೆಗಳು ತಮ್ಮ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿವೆ. ಹೆಲಿಕಾಪ್ಟರ್ ಪೈಲಟ್ ಆಗಲು ಬಯಸುವವರು ಮೊದಲು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ನಡೆಸುವ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ, ನಂತರ ತರಬೇತಿಗಾಗಿ ವಿದೇಶಕ್ಕೆ ತೆರಳಬೇಕಾದ ಅನಿವಾರ್ಯತೆಯಿದೆ. ಈ ಕ್ಷೇತ್ರದಲ್ಲಿ ಪವನ್ ಹನ್ಸ್, ಗ್ಲೋಬಲ್ ವೆಕ್ಟ್ರಾ ಹಾಗೂ ಹೆಲಿಗೋ ಚಾರ್ಟರ್ಸ್‌ನಂತಹ ಕೆಲವೇ ಪ್ರಮುಖ ಸಂಸ್ಥೆಗಳು ಮಾತ್ರ ಕಾರ್ಯಾಚರಣೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಅವರು ಹೇಳಿದ್ದಾರೆ.

2027ರ ಯುಪಿ ವಿಧಾನಸಭೆ ಚುನಾವಣೆ: 2ನೇ ಸುತ್ತಿನ ಮಾತುಕತೆ
ಕಾಂಗ್ರೆಸ್‌ಗೆ 26 ಕ್ಷೇತ್ರ ಬಿಟ್ಟುಕೊಡಲು ಎಸ್‌ಪಿ ಅಂಗೀಕಾರ

ನವದೆಹಲಿ, ನ.24: 2027ರಲ್ಲಿ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ನಡುವಿನ ಸೀಟು ಹಂಚಿಕೆ ಮಾತುಕತೆ ಮುಂದುವರಿದಿದೆ. ಈ ನಡುವೆ ಕಾಂಗ್ರೆಸ್‌ಗೆ 26 ವಿಧಾನಸಭಾ ಕ್ಷೇತ್ರಗಳನ್ನು ಬಿಟ್ಟುಕೊಡಲು ಸಮಾಜವಾದಿ ಪಕ್ಷ ಪ್ರಸ್ತಾಪಿಸಿದೆ ಎಂದು ಎಸ್‌ಪಿ ಪ್ರಧಾನ ಕಾರ್ಯದರ್ಶಿ ರಾಮಗೋಪಾಲ್ ಯಾದವ್ ತಿಳಿಸಿದ್ದಾರೆ. ದೆಹಲಿಯಲ್ಲಿ ಕಾಂಗ್ರೆಸ್ ನಾಯಕ ಪ್ರಮೋದ್ ತಿವಾರಿ ಅವರ ನಿವಾಸದಲ್ಲಿ ಎರಡೂ ಪಕ್ಷಗಳ ನಡುವೆ ಎರಡನೇ ಸುತ್ತಿನ ಮಾತುಕತೆ ನಡೆಯುವ ಮುನ್ನ ಮಾತನಾಡಿದ ರಾಮಗೋಪಾಲ್ ಯಾದವ್, ಕಾಂಗ್ರೆಸ್‌ಗೆ 26 ಕ್ಷೇತ್ರಗಳನ್ನು ನೀಡುವ ಪ್ರಸ್ತಾಪ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಈ 26 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಈ ಹಿಂದೆ ಗೆದ್ದಿದ್ದ



ಎರಡು ಕ್ಷೇತ್ರಗಳು, ಎರಡನೇ ಸ್ಥಾನ ಪಡೆದಿದ್ದ ನಾಲ್ಕು ಕ್ಷೇತ್ರಗಳು ಸೇರಿವೆ. ಉಳಿದ 20 ಕ್ಷೇತ್ರಗಳಲ್ಲಿ ಹಿಂದಿನ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ 60ರಿಂದ 70 ಸಾವಿರ ಮತಗಳನ್ನು ಪಡೆದಿದ್ದರೆ, ಕಾಂಗ್ರೆಸ್ 2 ಸಾವಿರ ಮತಗಳನ್ನು ಮಾತ್ರ ಪಡೆದಿತ್ತು ಎಂದು ರಾಮಗೋಪಾಲ್ ಯಾದವ್ ವಿವರಿಸಿದ್ದಾರೆ. ಇದಕ್ಕೂ ಮೊದಲು ಕಾಂಗ್ರೆಸ್ 181 ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಬೇಡಿಕೆ ಮುಂದಿಟ್ಟಿತ್ತು. ಬಳಿಕ ಅದನ್ನು ಪರಿಷ್ಕರಿಸಿ 130 ಕ್ಷೇತ್ರಗಳ ಪಟ್ಟಿಯನ್ನು ಸಮಾಜವಾದಿ ಪಕ್ಷಕ್ಕೆ ಸಲ್ಲಿಸಿತ್ತು. ಕಾಂಗ್ರೆಸ್‌ನ ಈ ಬೇಡಿಕೆಗೆ ಪ್ರತಿಯಾಗಿ ಎಸ್‌ಪಿ 26 ಕ್ಷೇತ್ರಗಳ ಪ್ರಸ್ತಾಪ ಮಾಡಿದೆ.

ಉತ್ತರ ಪ್ರದೇಶದಲ್ಲಿ ಒಟ್ಟು 403 ವಿಧಾನಸಭಾ ಕ್ಷೇತ್ರಗಳಿದ್ದು, ಎರಡೂ ಪಕ್ಷಗಳ ನಡುವೆ ಕ್ಷೇತ್ರ ಹಂಚಿಕೆ ಕುರಿತು ಇನ್ನೂ ಅಂತಿಮ ಒಪ್ಪಂದವಾಗಿಲ್ಲ. ಮಾತುಕತೆಯ ಮೂಲಕ ಪರಸ್ಪರ ಒಪ್ಪಿಗೆಯ ತೀರ್ಮಾನಕ್ಕೆ ಬರಲು ಎರಡೂ ಪಕ್ಷಗಳ ನಾಯಕರು ಪ್ರಯತ್ನಿಸುತ್ತಿದ್ದಾರೆ.

ಇದೇ ವೇಳೆ, ಎಸ್‌ಪಿ ಮತ್ತು ಕಾಂಗ್ರೆಸ್ ಮೈತ್ರಿ ಮಾತುಕತೆ ಕುರಿತು ಉತ್ತರ ಪ್ರದೇಶ ಸಚಿವ ದಯಾಶಂಕರ್ ಸಿಂಗ್ ಟೀಕಿಸಿದ್ದು, ಎರಡೂ ಪಕ್ಷಗಳು ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಒಂದಾಗುತ್ತಿವೆ ಎಂದು ಆರೋಪಿಸಿದ್ದಾರೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಸೀಟು ಹಂಚಿಕೆ ಕುರಿತು ಉಭಯ ಪಕ್ಷಗಳ ನಡುವಿನ ಮಾತುಕತೆ ಯಾವ ತೀರ್ಮಾನಕ್ಕೆ ಬರಲಿದೆ ಎಂಬುದು ಕುತೂಹಲ ಮೂಡಿಸಿದೆ.

ಪಂಜಾಬ್‌ನಲ್ಲಿ ಮತ್ತೆ ಬಿಜೆಪಿ–ಅಕಾಲಿದಳ ಮೈತ್ರಿ: ಅಕಾಲಿದಳವೇ ದೊಡ್ಡಣ್ಣ, ಆ ಪಕ್ಷದಿಂದಲೇ ಮುಖ್ಯಮಂತ್ರಿ– ಅಮಿತ್ ಶಾ

ನವದೆಹಲಿ, ನ.24: ಮುಂಬರುವ 2027ರ ಪಂಜಾಬ್ ವಿಧಾನಸಭೆ ಚುನಾವಣೆಯನ್ನು ಒಟ್ಟಾಗಿ ಎದುರಿಸಲು ಬಿಜೆಪಿ ಮತ್ತು ಶಿರೋಮಣಿ ಅಕಾಲಿದಳ ಮೈತ್ರಿ ಘೋಷಿಸಿವೆ. ಆರು ವರ್ಷಗಳ ಬಳಿಕ ಹಳೆಯ ಮಿತ್ರಪಕ್ಷಗಳು ಮತ್ತೆ ಒಂದಾಗಿದ್ದು, ಅಕಾಲಿದಳವು ಎನ್‌ಡಿಎ ಮೈತ್ರಿಕೂಟಕ್ಕೆ ಮರಳಿದೆ.

ನವದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಹಾಗೂ ಅಕಾಲಿದಳದ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಮೈತ್ರಿಯನ್ನು ಅಧಿಕೃತವಾಗಿ ಪ್ರಕಟಿಸಿದರು.

ಮೈತ್ರಿಯಲ್ಲಿ ಅಕಾಲಿದಳವೇ ದೊಡ್ಡಣ್ಣನ ಪಾತ್ರ ನಿರ್ವಹಿಸಲಿದೆ ಎಂದು ಅಮಿತ್ ಶಾ ಸ್ಪಷ್ಟಪಡಿಸಿದರು. ಪಂಜಾಬ್‌ನ 117 ವಿಧಾನಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಅಕಾಲಿದಳ ಮೈತ್ರಿಕೂಟ ಒಟ್ಟಾಗಿ ಸ್ಪರ್ಧಿಸಲಿದೆ.

ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ದೊಡ್ಡಣ್ಣನ ಸ್ಥಾನದಲ್ಲಿರುವ ಪಕ್ಷದಿಂದಲೇ ಮುಖ್ಯಮಂತ್ರಿ ಆಯ್ಕೆಯಾಗುತ್ತಾರೆ' ಎಂದು ಹೇಳುವ ಮೂಲಕ ಅಕಾಲಿದಳದ ನಾಯಕ ಮುಖ್ಯಮಂತ್ರಿ ಆಗುವ ಸುಳಿವು ನೀಡಿದರು. 2020ರಲ್ಲಿ ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಅಕಾಲಿದಳವು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಿಂದ ಹೊರಬಂದಿತ್ತು. ಇದೀಗ



ಆರು ವರ್ಷಗಳ ಬಳಿಕ ಎರಡೂ ಪಕ್ಷಗಳು ಮತ್ತೆ ಕೈಜೋಡಿಸಿವೆ. ಅಕಾಲಿದಳ ಎನ್‌ಡಿಎಗೆ ಮರಳಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ಈ ಮೈತ್ರಿಯು ಪಂಜಾಬ್‌ನಲ್ಲಿ ಮಾತ್ರವಲ್ಲದೆ ದೇಶಾದ್ಯಂತ ಹಿಂದೂ–ಸಿಖ್ ಬಾಂಧವ್ಯದ ಸಂಕೇತವಾಗಲಿದೆ ಎಂದು ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದರು. ಪಂಜಾಬ್‌ನಲ್ಲಿರುವ ಮಾದಕ ವಸ್ತುಗಳ ಜಾಲದ ನಿರ್ಮೂಲನೆ, ಭ್ರಷ್ಟಾಚಾರ ನಿಯಂತ್ರಣ, ಕಾನೂನು ಸುವ್ಯವಸ್ಥೆ ಸುಧಾರಣೆ ಹಾಗೂ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಮೈತ್ರಿಕೂಟದ ಪ್ರಮುಖ ಆದ್ಯತೆಗಳಾಗಿವೆ ಎಂದು ತಿಳಿಸಿದರು. ಅಕಾಲಿದಳದ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಮೈತ್ರಿಯನ್ನು ರಾಜಕೀಯ ಒಪ್ಪಂದ ಮಾತ್ರವಲ್ಲ, ಪಂಜಾಬ್‌ನ ಹಿತದೃಷ್ಟಿಯಿಂದ ರೂಪುಗೊಂಡ ಭಾವನಾತ್ಮಕ ಸಂಬಂಧ ಎಂದು ಬಣ್ಣಿಸಿದರು. ಬಿಜೆಪಿ ಮತ್ತು ಅಕಾಲಿದಳದ ನಡುವಿನ ಸಂಬಂಧವನ್ನು ತಮ್ಮ ತಂದೆ ಪ್ರಕಾಶ್ ಸಿಂಗ್ ಬಾದಲ್ ಹಾಗೂ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಬೆಳೆಸಿದ್ದರು ಎಂದು ಹೇಳಿದರು. 2027ರ ವಿಧಾನಸಭೆ ಚುನಾವಣೆಯಲ್ಲಿ ಆಡಳಿತಾರೂಢ ಆಮ್ ಆದ್ಮಿ ಪಕ್ಷವನ್ನು ಸೋಲಿಸಿ ಎನ್‌ಡಿಎ ಅಧಿಕಾರಕ್ಕೆ ಬರಲಿದೆ ಎಂದು ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದರು. ಕ್ಷೇತ್ರ ಹಂಚಿಕೆಯ ವಿವರಗಳನ್ನು ಇನ್ನೂ ಪ್ರಕಟಿಸಿಲ್ಲ.

ಎಸ್‌ಪಿ ಮುಖಂಡ ಆಜಂಖಾನ್ ವಿರುದ್ಧ 20 ವರ್ಷ ಹಳೇ ಪ್ರಕರಣಕ್ಕೆ ಮರುಜೀವ

ಲಖನೌ, ನ. 24: ಸಮಾಜವಾದಿ ಪಕ್ಷದ (ಎಸ್ಪಿ) ಹಿರಿಯ ನಾಯಕ ಹಾಗೂ ಮಾಜಿ ಸಚಿವ ಆಜಂ ಖಾನ್ ವಿರುದ್ಧ 2006ರ ಘಟನೆಗೆ ಸಂಬಂಧಿಸಿದ ಹಳೆಯ ಪ್ರಕರಣದ ಮರುತನಿಖೆಯನ್ನು ಉತ್ತರ ಪ್ರದೇಶ ಪೊಲೀಸರು ಆರಂಭಿಸಿದ್ದಾರೆ. ನ್ಯಾಯಾಲಯದ ಆದೇಶದ ಮೇರೆಗೆ ಈ ಭೂವಿವಾದ ಪ್ರಕರಣದ ತನಿಖೆಯನ್ನು ಮತ್ತೆ ಕೈಗೆತ್ತಿಕೊಳ್ಳಲಾಗಿದ್ದು, ನ.22ರಂದು ರಾಮಪುರ ಪೊಲೀಸರು ಆಜಂ ಖಾನ್ ನಿವಾಸಕ್ಕೆ ನೋಟಿಸ್ ನೀಡಲು ತೆರಳಿದ್ದಾರೆ.

ಈ ಪ್ರಕರಣದಲ್ಲಿ ಮರುತನಿಖೆ ನಡೆಸುವಂತೆ ನ್ಯಾಯಾಲಯ ಆದೇಶ ನೀಡಿ 22 ತಿಂಗಳು ಕಳೆದ ಬಳಿಕ ಇದೀಗ ಪೊಲೀಸರು ತನಿಖಾ ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ. 2006ರಲ್ಲಿ ನಡೆದ ಭೂಮಿ ತೆರವು ಹಾಗೂ ಅಂಗಡಿ ನೆಲಸಮ ಕಾರ್ಯಾಚರಣೆಗೆ ಸಂಬಂಧಿಸಿದಂತೆ 2007ರಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿಂದೆ ಪ್ರಕರಣದಲ್ಲಿ ಪೊಲೀಸರು ಅಂತಿಮ ವರದಿ ಸಲ್ಲಿಸಿದ್ದರೂ, ನ್ಯಾಯಾಲಯದ ನಿರ್ದೇಶನದ ಹಿನ್ನೆಲೆಯಲ್ಲಿ ಈಗ ಮತ್ತೆ ತನಿಖೆ ಕೈಗೆತ್ತಿಕೊಳ್ಳಲಾಗಿದೆ ಎಂದು ವರದಿಗಳು ತಿಳಿಸಿವೆ.

ಆಜಂ ಖಾನ್ ಸೂಚನೆಯಂತೆಯೇ ಅಂಗಡಿಯನ್ನು ತೆರವುಗೊಳಿಸಲಾಗಿತ್ತು ಎಂಬುದು ದೂರುದಾರರ ಪ್ರಮುಖ ಆರೋಪವಾಗಿದೆ. ರಾಮಪುರದ ಸ್ಥಳೀಯ ವರದಿಗಳ ಪ್ರಕಾರ, ಈ ಪ್ರಕರಣದ ಮೂಲ ದೂರುದಾರ ಅಫ್ಸರ್ ಖಾನ್ ಹಾಗೂ ಪ್ರಕರಣದಲ್ಲಿ ಹೆಸರಿಸಲಾಗಿದ್ದ ಅಂದಿನ ಉಪವಿಭಾಗಾಧಿಕಾರಿ (ಎಸ್ಡಿಎಂ) ಈಗಾಗಲೇ ಮೃತಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ, ಸದ್ಯ ಜುಲ್ಫಿಕಾರ್ ಎಂಬುವವರು ಈ ಪ್ರಕರಣದ ಮುಂದಿನ ಪ್ರಕ್ರಿಯೆಯನ್ನು ಮುಂದುವರಿಸುತ್ತಿದ್ದಾರೆ.

ಪ್ರತ್ಯೇಕ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನವೆಂಬರ್ 18ರಂದು ಜೈಲಿನಿಂದ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಉತ್ತರ ಪ್ರದೇಶ ಪೊಲೀಸರು ಈ ಹಳೆಯ ಪ್ರಕರಣದ ಮರುತನಿಖೆ ಆರಂಭಿಸಿರುವುದು ಗಮನಾರ್ಹವಾಗಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆಜಂ ಖಾನ್ ಅವರಿಗೆ ನೀಡಲಾಗಿದ್ದ ಮಧ್ಯಂತರ ಜಾಮೀನನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯನ್ನು ನ.19ರಂದು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು.

ಮಧ್ಯಂತರ ಜಾಮೀನು ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯಗಳು ಕೇವಲ ಪ್ರಾಥಮಿಕವಾದವು ಎಂದು ಸುಪ್ರೀಂ ಕೋರ್ಟ್ ಇದೇ ವೇಳೆ ಸ್ಪಷ್ಟಪಡಿಸಿತ್ತು. 2017ರಿಂದ ಇಲ್ಲಿಯವರೆಗೆ ಆಜಂ ಖಾನ್ ಅವರು 95 ಪ್ರಕರಣಗಳನ್ನು ಎದುರಿಸುತ್ತಿದ್ದು, ಬಂಧನ ಹಾಗೂ ಜಾಮೀನಿನ ಕಾನೂನು ಹೋರಾಟದ ನಡುವೆಯೇ ಇ.ಡಿ ಬಂಧನದ ವಿರುದ್ಧವೂ ಅವರು ನವೆಂಬರ್ ಆರಂಭದಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದನ್ನು ಇಲ್ಲಿ ಸ್ಮರಿಸಬಹುದು. ಈ ಪ್ರಕರಣದ ಹೊರತಾಗಿ, ಆಜಂ ಖಾನ್ ಅವರು ರಾಮಪುರದಲ್ಲಿ ಸ್ಥಾಪಿಸಿರುವ ಜೌಹರ್ ವಿಶ್ವವಿದ್ಯಾಲಯದ ವಿರುದ್ಧ ಕೈಗೊಳ್ಳಲಾಗಿರುವ ಆಡಳಿತಾತ್ಮಕ ಕ್ರಮಗಳೂ ವ್ಯಾಪಕ ಚರ್ಚೆಗೆ ಗ್ರಾಸವಾಗಿವೆ. ವಿಶ್ವವಿದ್ಯಾಲಯಕ್ಕೆ ನೆಲಸಮದ ಆತಂಕ ಎದುರಾಗಿದ್ದು,

ಆಡಳಿತಾತ್ಮಕ ಕ್ರಮಗಳು ಅಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪದವಿ ಹಾಗೂ ಭವಿಷ್ಯದ ಮೇಲೆ ಬೀರುತ್ತಿರುವ ಪರಿಣಾಮದ ಕುರಿತು ಗಂಭೀರ ಪ್ರಶ್ನೆಗಳು ಎದ್ದಿವೆ. 2006ರಲ್ಲಿ ನಡೆದ ಭೂಮಿ ತೆರವು ಘಟನೆಗೆ ಸಂಬಂಧಿಸಿದಂತೆ 2007ರಲ್ಲಿ ದಾಖಲಾಗಿದ್ದ ಸುಮಾರು ಎರಡು ದಶಕಗಳಷ್ಟು ಹಳೆಯದಾದ ಈ ವಿವಾದವು ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಪ್ರತ್ಯೇಕ ಪ್ರಕರಣದಲ್ಲಿ ಜೈಲಿನಿಂದ ಬಿಡುಗಡೆಯಾದ ಬೆನ್ನಲ್ಲೇ ಹಳೆಯ ಪ್ರಕರಣದ ಮರುತನಿಖೆಗೆ ಪೊ

ಪ್ರಯಾಣಿಕರಿಗೆ ಅನುಕೂಲ, ಹೊರ ವರ್ತುಲ ರಸ್ತೆಯಲ್ಲಿ ಸಂಚಾರ ದಟ್ಟಣೆ ಕಡಿಮೆ: ಸಚಿವ ಕೃಷ್ಣಬೈರೇಗೌಡ

ಮೆಟ್ರೋ 2ನೇ ಹಂತದ ನೀಲಿಮಾರ್ಗದಲ್ಲಿ ಪ್ರಾಯೋಗಿಕ ರೈಲು ಸಂಚಾರಕ್ಕೆ ಚಾಲನೆ



ಬೆಂಗಳೂರು, ನ.24: ನಮ್ಮ ಮೆಟ್ರೋದ ಎರಡನೇ ಹಂತದ ಭಾಗವಾಗಿರುವ ನೀಲಿ ಮಾರ್ಗದಲ್ಲಿ ಪ್ರಾಯೋಗಿಕ ರೈಲು ಸಂಚಾರ ಆರಂಭವಾಗಿದ್ದು, ಇದು ಬೆಂಗಳೂರಿನ ಹೊರ ವರ್ತುಲ ರಸ್ತೆಯಲ್ಲಿ (ಒಆರ್‌ಆರ್) ಸಂಚಾರ ದಟ್ಟಣೆ ಕಡಿಮೆ ಮಾಡುವ ಗುರಿ ಹೊಂದಿದೆ. ಕೆ.ಆರ್.ಪುರಂನಿಂದ ದೊಡ್ಡನೆಕ್ಕುಂದಿವರೆಗೆ ಮಂಗಳವಾರ ಪ್ರಾಯೋಗಿಕ ಸಂಚಾರ ಆರಂಭಿಸಿರುವುದನ್ನು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಸ್ವಾಗತಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಸಚಿವರು, ಬೆಂಗಳೂರು ಹೊರ ವರ್ತುಲ ರಸ್ತೆ ಸಂಚಾರ ದಟ್ಟಣೆಯ ಮಾರ್ಗವಾಗಿದ್ದು, ಉದ್ಯೋಗ ನಿಮಿತ್ತ ಇಲ್ಲಿ 10ರಿಂದ 12 ಲಕ್ಷ ಜನರು ಪ್ರತಿನಿತ್ಯ ಸಂಚರಿಸುತ್ತಾರೆ. ಇದು ಪ್ರಯಾಣಿಕರಿಗೆ ಪ್ರಮುಖ ಅನುಕೂಲಕರ ಮಾರ್ಗವಾಗಿರುವ ಜತೆಗೆ ರಾಜ್ಯದ ಆರ್ಥಿಕ ಮತ್ತು ಪ್ರಮುಖ ಐಟಿ ರಫ್ತಿಗೂ ಮುಖ್ಯ. ಈ ಮಾರ್ಗ ತಂತ್ರಜ್ಞಾನ ವಲಯದ ವಿವಿಧ ಹಂತಗಳಲ್ಲಿರುವ ಉದ್ಯೋಗಿಗಳನ್ನು ಪರಸ್ಪರ ಸಂಪರ್ಕಿಸುತ್ತದೆ ಎಂದು ತಿಳಿಸಿದರು. 2016–17ರಲ್ಲಿ ಮೊದಲ ಹಂತ 2 ಮುಗಿದ ಬಳಿಕ ಫೇಸ್ 2ಎ ಮತ್ತು ಫೇಸ್ 2ಬಿ ಅನ್ನು ಯೋಜಿಸಲಾಗಿತ್ತು. 2017ರಲ್ಲಿ ರಾಜ್ಯ ಸಚಿವ ಸಂಪುಟ ಕೂಡ ಯೋಜನೆಗೆ ಅನುಮೋದನೆ ನೀಡಿ, ಬಳಿಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. 2020ರಲ್ಲಿ ಇದರ ನಿರ್ಮಾಣ ಕಾರ್ಯ ಆರಂಭವಾಯಿತು ಎಂದು ಮಾಹಿತಿ ನೀಡಿದರು.

ಈ ಮುನ್ನ ಘೋಷಿಸಿದಂತೆ ಅಕ್ಟೋಬರ್ ಅಂತ್ಯದಿಂದ ಕೆ.ಆರ್.ಪುರಂನಿಂದ ಮಹದೇವಪುರ ದವರೆಗೆ ಪ್ರಾಯೋಗಿಕ ಸಂಚಾರ ಪ್ರಾರಂಭವಾಗಿದೆ. ಆರಂಭದಲ್ಲಿ ನಾಲ್ಕು ನಿಲ್ದಾಣವನ್ನು ತಲುಪಲಿದ್ದು, ಮುಂದಿನ ತಿಂಗಳು ಮತ್ತೆ ನಾಲ್ಕು ನಿಲ್ದಾಣಕ್ಕೆ ವಿಸ್ತರಿಸಲಾಗುವುದು ಎಂದು ಹೇಳಿದರು.

ಯಾಂತ್ರಿಕ ಸಿಗ್ನಲ್‌ಗಳನ್ನು ಅಳವಡಿಸಬೇಕಿದೆ. ಜನವರಿಯಲ್ಲಿ ಸಿಗ್ನಲಿಂಗ್ ಕೆಲಸಗಳು ಮುಗಿಯುವ ನಿರೀಕ್ಷೆ ಇದೆ. ಫೆಬ್ರವರಿಯಲ್ಲಿ ಸುರಕ್ಷತಾ ಪ್ರಮಾಣ ಪ್ರಕ್ರಿಯೆ ನಡೆಯಲಿದೆ. 19 ಕಿ.ಮೀ ಉದ್ದದ ಕೆ.ಆರ್. ಪುರಂ– ಸೆಂಟ್ರಲ್ ಸಿಲ್ಕ್ ಬೋರ್ಡ್ ಕಾರಿಡಾರ್‌ನಲ್ಲಿ ಒಟ್ಟು 13 ನಿಲ್ದಾಣಗಳಿವೆ. ಮುಂದಿನ ವರ್ಷದ ಮಧ್ಯಭಾಗವನ್ನು ಗುರಿಯಾಗಿಟ್ಟುಕೊಂಡು ಅಗತ್ಯವಿರುವ ಕಾರ್ಯವಿಧಾನಗಳು ಹಾಗೂ ಸುರಕ್ಷತಾ ಅನುಮೋದನೆಗಳನ್ನು ಪೂರ್ಣಗೊಳಿಸಿ, ಸುಮಾರು ಏಳರಿಂದ ಎಂಟು ತಿಂಗಳುಗಳಲ್ಲಿ ಈ ಮಾರ್ಗವನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲು ಸರ್ಕಾರ ಉದ್ದೇಶಿಸಿದೆ ಎಂದು ತಿಳಿಸಿದರು. ಫೇಸ್ 2ಎ ಮತ್ತು 2ಬಿ ಪ್ರಗತಿಯನ್ನು ಪ್ರತಿನಿತ್ಯ ಪರಿಶೀಲಿಸಲಾಗುವುದು. ಕೆ.ಆರ್.ಪುರಂ ಮತ್ತು ಹೆಬ್ಬಾಳದ ನಡುವಿನ ಕಾಮಗಾರಿಯನ್ನು ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಗುತ್ತಿಗೆದಾರರ ಮೇಲೂ ಒತ್ತಡ ಹೇರಲಾಗುತ್ತಿದೆ. ಈ ಬೃಹತ್ ಸಂಪರ್ಕ ಯೋಜನೆಯು ಸೆಂಟ್ರಲ್ ಸಿಲ್ಕ್ ಬೋರ್ಡ್–ಕೆ.ಆರ್.ಪುರಂ, ಕೆ.ಆರ್.ಪುರಂ–ಹೆಬ್ಬಾಳ ಹಾಗೂ ಹೆಬ್ಬಾಳ–ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗಗಳನ್ನು ಒಳಗೊಂಡಿದೆ ಎಂದರು.



ಕಾರ್ಮಿಕ ಸಚಿವರ ವಿಶೇಷಾಧಿಕಾರಿ ಜಿ.ಎಸ್. ಮಂಜುನಾಥ್ ಅವರ ಪುತ್ರಿ ಜಿ.ಎಂ. ಸುಭಿಕ್ಷಾ ಹಾಗೂ ಎಂ. ಚಂದ್ರಶೇಖರ್ ಅವರ ವಿವಾಹ ಚಿಕ್ಕಬೇಗೂರಿನ ಧಾರೆ ಕನ್ವೆನ್ಷನ್ ಹಾಲ್ ನಲ್ಲಿ ನೆರವೇರಿತು. ಸಚಿವ ಸಂತೋಷ್ ಲಾಡ್, ವಿಧಾನಪರಿಷತ್ ಉಪಸಭಾಪತಿ ಉಮಾಶ್ರೀ, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಕಾರ್ಮಿಕ ಮುಖಂಡ ಮೈಕೇಲ್ ಫರ್ನಾಂಡೀಸ್ ಮತ್ತಿತರ ಗಣ್ಯರು ವಧು–ವರನಿಗೆ ಶುಭ ಕೋರಿದರು.

ಆಸನ ಸಾಮರ್ಥ್ಯಕ್ಕೆ ತಕ್ಕಂತೆ ಪ್ರಯಾಣಿಕರಿಗೆ ಅವಕಾಶ: ಸಾರಿಗೆ ಇಲಾಖೆ ಆದೇಶ

ಶಕ್ತಿ ಯೋಜನೆ ಜಾರಿಯಾದ ನಂತರ ಬಸ್‌ಗಳಲ್ಲಿ ನಿಗದಿಗಿಂತ ಹೆಚ್ಚಿನ ಜನರಿಗೆ ಕೊಂಡೊಯ್ಯಲಾಗುತ್ತಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ಕ್ರಮ

ಬೆಂಗಳೂರು, ನ.24: ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಯಾದ ನಂತರ ಸರ್ಕಾರಿ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ.

ಉಚಿತ ಪ್ರಯಾಣದ ಹಿನ್ನೆಲೆಯಲ್ಲಿ ಬಸ್‌ಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚಿನ ಜನರನ್ನು ಕರೆದೊಯ್ಯಲಾಗುತ್ತಿದೆ ಎಂಬ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಿರುವ ಸಾರಿಗೆ ಇಲಾಖೆ, ಇನ್ಮುಂದೆ ಬಸ್‌ಗಳಲ್ಲಿ ಆಸನ ಸಾಮರ್ಥ್ಯಕ್ಕೆ ತಕ್ಕಂತೆ ಮಾತ್ರ ಪ್ರಯಾಣಿಕರನ್ನು ಕರೆದೊಯ್ಯಬೇಕು ಎಂದು ಹೊಸ ಆದೇಶ ಹೊರಡಿಸಿದೆ.

ಸಾರಿಗೆ ಇಲಾಖೆ TRANSPORT DEPARTMENT

ಸಾರಿಗೆ ಇಲಾಖೆಯ ಈ ನೂತನ ಸೂಚನೆಯ ಪ್ರಕಾರ, ರಾಜ್ಯಾದ್ಯಂತ ಸಂಚರಿಸುವ ಎಲ್ಲಾ ಮಾದರಿಯ ಸಾರಿಗೆ ವಾಹನಗಳಲ್ಲಿ ನಿಗದಿತ ಸೀಟುಗಳ ಸಂಖ್ಯೆಗೆ ಅನುಗುಣವಾಗಿ ಮಾತ್ರ ಪ್ರಯಾಣಿಕರಿಗೆ ಪ್ರವೇಶ ನೀಡಬೇಕು. ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರಿಗೆ ನಿರ್ದೇಶನ ನೀಡಲಾಗಿದ್ದು, ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆಯನ್ನೂ ನೀಡಲಾಗಿದೆ.

ಈ ಹೊಸ ನಿಯಮದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬಸ್‌ಗಳಲ್ಲಿನ ಜನದಟ್ಟಣೆ ನಿಯಂತ್ರಣಕ್ಕೆ ಬರುವುದರಿಂದ ನಿತ್ಯ ಪ್ರಯಾಣಿಸುವ ಪುರುಷರು, ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಒಟ್ಟಿನಲ್ಲಿ, ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಜಾರಿಯಾಗಿರುವ ಈ ಆದೇಶವನ್ನು ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಸೇರಿದಂತೆ ರಾಜ್ಯದ ಸಾರಿಗೆ ನಿಗಮಗಳು ಯಾವ ರೀತಿ ಅನುಷ್ಠಾನಕ್ಕೆ ತರಲಿವೆ ಎಂಬುದು ಸದ್ಯದ ಕುತೂಹಲವಾಗಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣ: ಜಾಮೀನು ಕೋರಿ 2ನೇ ಬಾರಿಗೆ ಹೈಕೋರ್ಟ್‌ಗೆ ಪವಿತ್ರಾಗೌಡ ಅರ್ಜಿ

ಬೆಂಗಳೂರು, ನ.24: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಪವಿತ್ರಾ ಗೌಡ ಅವರು ಜಾಮೀನು ಮಂಜೂರು ಮಾಡುವಂತೆ ಕೋರಿ ಎರಡನೇ ಬಾರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ಈ ಹಿಂದೆ ಸುಪ್ರೀಂಕೋರ್ಟ್ ಇವರ ಜಾಮೀನನ್ನು ರದ್ದುಗೊಳಿಸಿತ್ತು. ಇದೀಗ ವಕೀಲ ನಾರಾಯಣಸ್ವಾಮಿ ಅವರ ಮೂಲಕ ಹೊಸದಾಗಿ ಜಾಮೀನು ಅರ್ಜಿ ಸಲ್ಲಿಸಲಾಗಿದ್ದು, ನ್ಯಾಯಮೂರ್ತಿ ವಿಶ್ವಜೀತ್ ಶೆಟ್ಟಿ ಅವರ ಪೀಠವು ಇಂದು (ನ.24) ವಿಚಾರಣೆ ಕೈಗೆತ್ತಿಕೊಳ್ಳಲಿದೆ. ಕಳೆದ ಒಂದು ವರ್ಷದಿಂದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಪವಿತ್ರಾ ಗೌಡ ಅಲ್ಲಿಂದಲೇ ವಿಚಾರಣೆ ಎದುರಿಸುತ್ತಿದ್ದಾರೆ.

ಈ ಪ್ರಕರಣದ ಪ್ರತ್ಯಕ್ಷ ದರ್ಶಿಗಳೆಲ್ಲರೂ ಪ್ರತಿಕೂಲ ಸಾಕ್ಷ್ಯ (ಉಲ್ಟಾ ಸಾಕ್ಷ್ಯ) ನೀಡುತ್ತಿದ್ದು, ವಿಚಾರಣೆಯ ವೇಳೆ ತಮ್ಮ ಕಕ್ಷಿದಾರರ ವಿರುದ್ಧ ಯಾವುದೇ ಆರೋಪಗಳು ಸಾಬೀತಾಗಿಲ್ಲ ಎಂದು ಅವರ ಪರ ವಕೀಲರು ಅರ್ಜಿಯಲ್ಲಿ ವಾದಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸೂಕ್ತ ಷರತ್ತುಗಳನ್ನು ವಿಧಿಸಿ ಜಾಮೀನು ನೀಡಬೇಕು ಎಂದು ಮನವಿ ಮಾಡಲಾಗಿದೆ.

ಕಳೆದ ಸೆಪ್ಟೆಂಬರ್ 26ರಂದು 59ನೇ ಸೆಷನ್ಸ್ ನ್ಯಾಯಾಲಯವು ಇವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು-ಜನಪರ ಸಂಘಟನೆಗಳ ಒಕ್ಕೂಟದ ಮನವಿಗೆ ಪ್ರತಿಕ್ರಿಯೆ

ಜಿಬಿಎ ಚುನಾವಣೆಗೆ ರಾಜ್ಯದ ಮತಪಟ್ಟಿ ಬಳಸಲು ಸಿದ್ಧ: ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ

ಬೆಂಗಳೂರು, ನ.24: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಚುನಾವಣೆಗೆ 2025ರ ಮತದಾರರ ಪಟ್ಟಿಯನ್ನೇ ಬಳಸಲು ರಾಜ್ಯ ಚುನಾವಣಾ ಆಯೋಗ ಸಿದ್ಧವಿದೆ. ಈ ಸಂಬಂಧ ಸುಪ್ರೀಂಕೋರ್ಟ್‌ನ ನಿರ್ದೇಶನ ಬಂದ ಕೂಡಲೇ ರಾಜ್ಯದ ಮತದಾರರ ಪಟ್ಟಿಯನ್ನು ಬಳಸಿಕೊಂಡು ಚುನಾವಣೆ ನಡೆಸಲಾಗುವುದು ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ತಿಳಿಸಿದ್ದಾರೆ.

ಈ ಮೂಲಕ ರಾಜ್ಯದಲ್ಲಿ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಹಳೆಯ ಮತಪಟ್ಟಿ ಬಳಸಿ ಚುನಾವಣೆಗೆ ಆಯೋಗ ಸನ್ನದ್ಧವಾಗಿದೆ ಎಂದು ಅವರು ಇಂಗಿತ ವ್ಯಕ್ತಪಡಿಸಿದ್ದಾರೆ.

ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಮತ್ತು ಜನಪರ ಸಂಘಟನೆಗಳ ಒಕ್ಕೂಟದಿಂದ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಮೂಲಕ ಸಿದ್ಧಪಡಿಸಿರುವ ಅಂತಿಮ ಮತದಾರರ ಪಟ್ಟಿಯನ್ನು ಬಳಸಬಾರದು. ಅದರ ಬದಲಿಗೆ 2025ರ ಮತದಾರರ ಪಟ್ಟಿಯನ್ನೇ ಬಳಸಬೇಕು ಎಂದು ಆಗ್ರಹಿಸಿ ರಾಜ್ಯ ಚುನಾವಣಾ ಆಯುಕ್ತರಿಗೆ ಮನವಿ ಸಲ್ಲಿಸಿತು. ಒಕ್ಕೂಟದ ಮನವಿ ಸ್ವೀಕರಿಸಿ ಪ್ರತಿಕ್ರಿಯಿಸಿದ ಸಂಗ್ರೇಶಿ, 2025ರ ಮತದಾರರ ಪಟ್ಟಿಯನ್ನಿಟ್ಟುಕೊಂಡೇ ಜಿಬಿಎ ಚುನಾವಣೆ ನಡೆಸಲು ನಿರ್ದೇಶನ ನೀಡಬೇಕೆಂದು ಸುಪ್ರೀಂಕೋರ್ಟ್ ಗೆ ಮನವಿ ಸಲ್ಲಿಸಲಾಗಿದೆ. ನಿರ್ದೇಶನ ಬಂದ ಕೂಡಲೇ ರಾಜ್ಯದ ಮತದಾರರ ಪಟ್ಟಿಯನ್ನೇ ಬಳಸಿಕೊಂಡು ಜಿಬಿಎ ಚುನಾವಣೆ ನಡೆಸುತ್ತೇವೆ ಎಂದು ಸಂಗ್ರೇಶಿ ಹೇಳಿದರು.

ಜಿಬಿಎ ವ್ಯಾಪ್ತಿಯ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ ಅವರು, ರಾಜ್ಯ ಚುನಾವಣಾ ಆಯೋಗವು ಈಗಾಗಲೇ ಎಪ್ರಿಲ್ ವೇಳೆಗೆ ಸುಮಾರು 89 ಲಕ್ಷ ಮತದಾರರನ್ನು ಒಳಗೊಂಡ ಮತದಾರರ ಪಟ್ಟಿಯನ್ನು ಅಂತಿಮಗೊಳಿಸಿದೆ. ಹೊಸ ಮತದಾರರನ್ನು ಸೇರ್ಪಡೆಗೊಳಿಸಿಕೊಳ್ಳಲು ಸಿದ್ಧತೆ ನಡೆಸಲಾಗಿದ್ದು, ಈ ಮತಪಟ್ಟಿಯನ್ನು ಜಿಬಿಎ ಅಧಿಕಾರಿಗಳಿಗೂ ನೀಡಲಾಗಿದೆ ಎಂದು ಅವರು ತಿಳಿಸಿದರು.

ಗ್ರಾಮಸಭೆ ಮತ್ತು ವಾರ್ಡ್ ಸಭೆಗಳ ಕುರಿತು ರಾಜ್ಯ ಚುನಾವಣಾ ಆಯೋಗಕ್ಕೆ ರಾಜ್ಯ ಸರಕಾರ ಅಗತ್ಯವಾದ ದತ್ತಾಂಶ ಕೇಂದ್ರ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸಿದರೆ ಮತದಾರರ ಪಟ್ಟಿ ಸಿದ್ಧಪಡಿಸಲು ಆಯೋಗ ಸಿದ್ಧವಿದೆ. ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಮುಂಬರುವ ಅಧಿವೇಶನದಲ್ಲಿ ತಿದ್ದುಪಡಿ ಕಾಯ್ದೆಯಾಗಿ ಅಂಗೀಕಾರಗೊಂಡರೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾಗಲಿದೆ ಎಂದು ಸಂಗ್ರೇಶಿ ಮಾಹಿತಿ ನೀಡಿದರು.



ಈ ವೇಳೆಯಲ್ಲಿ ಎಸ್‌ಐಆರ್ ವಿರೋಧಿ ಒಕ್ಕೂಟದ ಜೆ.ಎಂ.ವೀರಸಗಯ್ಯ, ತಾರಾರಾವ್, ಸುನೀಲ್ ಸಿರಸಂಗಿ, ಅಮ್ಜದ್ ಪಾಷಾ, ಡಾ.ರಮೇಶ್ ಬೆಲ್ಲಮಕೊಂಡ, ನಾಗೇಶ್ ಅರಳಕುಪ್ಪೆ, ನೈನಾ, ಹೈದರ್ ಬೇಗ್, ರವಿ ಮೋಹನ್, ಪವನ್, ಬಸವರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬೆಂಗಳೂರು ಜಾತ್ರೆ ಸಂಭ್ರಮದಲ್ಲಿ ಆಡಳಿತದ ವೈಫಲ್ಯ ಮುಚ್ಚಿಡಲು ಸಾಧ್ಯವಿಲ್ಲ

ಜನರಿಗೆ ಜಾತ್ರೆ ಬೇಡ, ಪ್ರತಿನಿತ್ಯ ಅನುಭವಿಸುತ್ತಿರುವ ನರಕಯಾತನೆಗೆ ಮುಕ್ತಿ ಕೊಡಿಸಿ: ಅಶೋಕ್

ಬೆಂಗಳೂರು, ನ.24: ಡಿಸೆಂಬರ್ ತಿಂಗಳಲ್ಲಿ ಸುಮಾರು 20 ಕೋಟಿ ವೆಚ್ಚದಲ್ಲಿ 10 ದಿನ ಬೆಂಗಳೂರು ಜಾತ್ರೆ ಆಯೋಜಿಸುವ ಸರ್ಕಾರದ ನಿರ್ಧಾರಕ್ಕೆ ಬಿಜೆಪಿ ವಿರೋಧ ವ್ಯಕ್ತಪಡಿಸಿದೆ.

ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಬೆಂಗಳೂರಿನ ಜನರ ಕಣ್ಣಿಗೆ ಮಣ್ಣೆರಚಲು ಜಾತ್ರೆಯೇ ನಿಮ್ಮ ಹೊಸ ತಂತ್ರವೇ. ಬೆಂಗಳೂರು ಜಾತ್ರೆಗಿಂತ ಮೊದಲು ಬೆಂಗಳೂರಿಗರ ಜಂಜಾಟಕ್ಕೆ ಮುಕ್ತಿ ಕೊಡಿ ಸ್ವಾಮಿ ಎಂದು ಜಿಬಿಎ ಸಚಿವ ಕೃಷ್ಣ ಬೈರೇಗೌಡರಿಗೆ ಕುಟುಕಿದ್ದಾರೆ.

ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಅದ್ಧೂರಿ ಬೆಂಗಳೂರು ಜಾತ್ರೆ ಆಚರಣೆ ಯಾವ ಪುರುಷಾರ್ಥಕ್ಕಾಗಿ ಎಂದು ಪ್ರಶ್ನಿಸಿರುವ ಅವರು ಮೊದಲು ಬೆಂಗಳೂರಿನ ಜನ ಪ್ರತಿನಿತ್ಯ ಅನುಭವಿಸುತ್ತಿರುವ ನರಕಯಾತನೆ ತಪ್ಪಿಸಲು ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದ್ದಾರೆ.

ಬೆಂಗಳೂರಿಗರಿಗೆ ಬೇಕಿರುವುದು ಜಾತ್ರೆಯಲ್ಲ; ಸುಗಮ ಸಂಚಾರ, ಗುಂಡಿಗಳಿಲ್ಲದ ರಸ್ತೆಗಳು, ಸ್ವಚ್ಛ ಪರಿಸರ, ನಿರಂತರ ಕುಡಿಯುವ ನೀರು, ಸಮರ್ಪಕ ಒಳಚರಂಡಿ ಮತ್ತು ಉತ್ತಮ ನಾಗರಿಕ ಸೌಲಭ್ಯಗಳು. ಕಲಾವಿದರಿಗೆ ವೇದಿಕೆ ಕಲ್ಪಿಸುವುದಕ್ಕೆ ನಮ್ಮ ವಿರೋಧವಿಲ್ಲ. ನಮ್ಮ ನಾಡಿನ ಕಲೆ, ಸಂಸ್ಕೃತಿ ಮತ್ತು ಕಲಾವಿದರನ್ನು ಗೌರವಿಸುವುದು ಸ್ವಾಗತಾರ್ಹ. ಆದರೆ ಅದನ್ನೇ ಆಡಳಿತದ ವೈಫಲ್ಯಗಳನ್ನು ಮುಚ್ಚಿಹಾಕುವ ರಾಜಕೀಯದ ವೇದಿಕೆಯನ್ನಾಗಿ ಮಾಡಬೇಡಿ ಎಂದಿದ್ದಾರೆ. ಈ ಜಾತ್ರೆ ಮುಗಿದ ಮರುದಿನ ಬೆಂಗಳೂರಿನ ರಸ್ತೆಗಳು ಗುಂಡಿಮುಕ್ತ ವಾಗುತ್ತವೆಯೇ, ಕಸದ ಸಮಸ್ಯೆ ಬಗೆಹರಿಯುತ್ತದೆಯೇ, ಟ್ರಾಫಿಕ್ ಕಡಿಮೆಯಾಗುತ್ತದೆಯೇ, ಕುಡಿಯುವ ನೀರು ಸಿಗುತ್ತದೆಯೇ. ಬೆಂಗಳೂರು ಜಾತ್ರೆಯ ಸಂಭ್ರಮದ ಹಿಂದೆ ಆಡಳಿತದ ವೈಫಲ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ. ಬೆಂಗಳೂರಿಗೆ ಜಾತ್ರೆಯ ಗಿಮಿಕ್ ಬೇಡ, ಜವಾಬ್ದಾರಿಯುತ ಆಡಳಿತ ಬೇಕು ಎಂದು ಆರ್. ಅಶೋಕ್ ಒತ್ತಾಯಿಸಿದ್ದಾರೆ.



ವಿಶ್ವ ರೋಬೋ ಒಲಿಂಪಿಯಾಡ್‌ನಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಚಿವ ಮಧು ಬಂಗಾರಪ್ಪ ಅಭಿನಂದನೆ

ಬೆಂಗಳೂರು, ನ.24: ಕ್ರೊಯೇಷಿಯಾದ ಝಾಗ್ರೆಬ್‌ನಲ್ಲಿ ನಡೆದ ವಿಶ್ವ ರೋಬೋಟ್ ಒಲಿಂಪಿಯಾಡ್ ಯುರೋಪ್ ಓಪನ್ –2026 ಅಂತಾರಾಷ್ಟ್ರೀಯ ರೋಬೋಟಿಕ್ಸ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಗಳಿಸಿ ದೇಶದ ಕೀರ್ತಿ ಹೆಚ್ಚಿಸಿದ ಬೆಂಗಳೂರಿನ ವಿದ್ಯಾರ್ಥಿಗಳಾದ ಮಯೂಖ್ ನಾಗರಾಜು ಮತ್ತು ರೇಯಾಂಶ್ ಧಾಗ್ಲೆ ಅವರನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅಭಿನಂದಿಸಿದರು.



ಸಚಿವರ ಗೃಹ ಕಚೇರಿಯಲ್ಲಿ ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಸಚಿವರನ್ನು ಮಂಗಳವಾರ ಭೇಟಿಯಾಗಿ, ಸ್ಪರ್ಧೆಯಲ್ಲಿ ರೂಪಿಸಿದ್ದ ಯೋಜನೆ ಹಾಗೂ ತಮ್ಮ ಸಾಧನೆಯ ಕುರಿತು ವಿವರಿಸಿದರು. ವಿದ್ಯಾರ್ಥಿಗಳ ಪ್ರತಿಭೆ, ಪರಿಶ್ರಮ ಮತ್ತು ಸೃಜನಶೀಲತೆಯನ್ನು ಮೆಚ್ಚಿದ ಸಚಿವರು, ಅವರ ಸಾಧನೆಗೆ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದರು.

'ಟೆಕ್‌ಟೈಲ್ ಟ್ವಿನ್ಸ್' ತಂಡವಾಗಿ ಭಾರತವನ್ನು ಪ್ರತಿನಿಧಿಸಿದ್ದ ಮಯೂಖ್ ಮತ್ತು ರೇಯಾಂಶ್, 45 ದೇಶಗಳ 225 ತಂ



ಕೃಷಿ ವಿವಿ ಸಂಸ್ಥಾಪನಾ ದಿನಾಚರಣೆ: ರೈತರ ಸಂಕಷ್ಟ ಪರಿಹಾರ ಸಂಶೋಧನೆ ರೈತರಿಗೆ ತಲುಪಲಿ– ಪ್ರೊ.ಎಂ.ವಿ. ಧನಂಜಯ

ರಾಯಚೂರು, ನ. 24: ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳ, ಬೆಂಬಲ ಬೆಲೆ ಕೊರತೆ ಹಾಗೂ ಹವಾಮಾನ ವೈಪರೀತ್ಯದಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕೃಷಿ ಸಂಶೋಧನೆ, ತಂತ್ರಜ್ಞಾನ, ತರಬೇತಿ ಮತ್ತು ಸರ್ಕಾರದ ಯೋಜನೆಗಳು ಸಮನ್ವಯದಿಂದ ರೈತರನ್ನು ತಲುಪಬೇಕು ಎಂದು ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ವಿ. ಧನಂಜಯ ಹೇಳಿದರು.

ನಗರದ ಜಗಜ್ಯೋತಿ ಬಸವೇಶ್ವರ ಪ್ರೇಕ್ಷಾಗೃಹದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 18ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು



ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಲಾಭದಾಯಕವಾಗಿಲ್ಲ ಎಂಬ ಕಾರಣಕ್ಕೆ ರೈತರು ತಮ್ಮ ಮಕ್ಕಳನ್ನು ಕೃಷಿಯಿಂದ ದೂರವಿಡುತ್ತಿದ್ದಾರೆ. ಈ ಪರಿಸ್ಥಿತಿ ಬದಲಾಗಬೇಕಾದರೆ ರೈತರ ಉತ್ಪನ್ನಗಳಿಗೆ ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರ ಮಾರುಕಟ್ಟೆ ಕಲ್ಪಿಸಬೇಕು. ಒಎನ್‌ಡಿಸಿ, ಇ–ನಾಮ್ ಮತ್ತು ಜೆಮ್‌ನಂತಹ ಡಿಜಿಟಲ್ ವೇದಿಕೆಗಳ ಮೂಲಕ ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಸ್ಟಾರ್ಟ್‌ಅಪ್‌ಗಳ ಉತ್ಪನ್ನಗಳಿಗೆ ದೊಡ್ಡ ಮಾರುಕಟ್ಟೆ ಸೃಷ್ಟಿಸಬೇಕು ಎಂದರು.

ಪ್ರಸ್ತುತ ರೈತರಿಗೆ ಶೇ.40ರಷ್ಟು ಮಾತ್ರ ಉತ್ಕೃಷ್ಟ ಬೀಜಗಳು ಲಭ್ಯವಾಗುತ್ತಿವೆ. ವಿಕಸಿತ ಭಾರತ 2047ರ ಗುರಿ ಸಾಧನೆಗೆ ಈ ಪ್ರಮಾಣವನ್ನು ಶೇ.60ಕ್ಕೆ ಹೆಚ್ಚಿಸಬೇಕು. ಹೊಸ ತಳಿಗಳ ಅಭಿವೃದ್ಧಿ ಮತ್ತು ಸಂಶೋಧನೆಗಳು ಪ್ರಯೋಗಾಲಯಕ್ಕೆ ಸೀಮಿತವಾಗದೆ ರೈತರ ಹೊಲಗಳಿಗೆ ತಲುಪಬೇಕು ಎಂದರು.

ಕೃಷಿ ಪದವೀಧರರಿಗೆ ಕೇವಲ ಪದವಿ ನೀಡದೆ ಪ್ರಾಯೋಗಿಕ ಕೌಶಲ ಮತ್ತು ಉದ್ಯಮಶೀಲತಾ ತರಬೇತಿ ನೀಡಬೇಕು. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಸ್ಟಾರ್ಟ್ ಅಪ್‌ಗಳ ಮೂಲಕ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಬೇಕು. ಮಹಿಳಾ ಉದ್ಯಮಿಗಳಿಗೆ ವಿವಿಧ ಯೋಜನೆಗಳಡಿ ದೊರೆಯುವ ಸಹಾಯಧನದ ಸೌಲಭ್ಯ ತಲುಪಿಸಬೇಕು ಎಂದರು.

ರಾಸಾಯನಿಕ ಕೀಟನಾಶಕಗಳ ಬಳಕೆ ನಿಯಂತ್ರಿಸಿ ಸುರಕ್ಷಿತ ಆಹಾರ ಉತ್ಪಾದನೆಗೆ ಆದ್ಯತೆ ನೀಡಬೇಕು. ಕೀಟನಾಶಕ ಸಿಂಪಡಿಸಿದ ಬಳಿಕ ನಿಗದಿತ ಅವಧಿ ಪೂರ್ಣಗೊಂಡ ನಂತರವೇ ಬೆಳೆ ಕಟಾವು ಮಾಡುವ ಕುರಿತು ರೈತರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ರಾಯಚೂರು ಕೃಷಿ ವಿಶ್ವವಿದ್ಯಾಲಯದ ಇ–ಸ್ಯಾಪ್ ತಂತ್ರಜ್ಞಾನವನ್ನು ಕೃತಕ ಬುದ್ಧಿಮತ್ತೆ ಆಧಾರಿತವಾಗಿ ಮೇಲ್ದರ್ಜೆಗೇರಿಸಿರುವುದು ಶ್ಲಾಘನೀಯ. ಗುಣಮಟ್ಟದ ಬೀಜೋ ತ್ಪಾದನೆ ಮತ್ತು ಜೈವಿಕ ಗೊಬ್ಬರ ಉತ್ಪಾದನೆಯ ಮೂಲಕ ವಿಶ್ವವಿದ್ಯಾಲಯ ರೈತರಿಗೆ ನೆರವಾಗುತ್ತಿದೆ ಎಂದರು.

ನಿಡಘಟ್ಟ ಪ್ರವೇಶ–ನಿರ್ಗಮನ ಬಂದ್‌ಗೆ ವಿರೋಧ ಯಥಾಸ್ಥಿತಿ ಕಾಯ್ದುಕೊಳ್ಳಲು ಚಲುವರಾಯಸ್ವಾಮಿ ಸೂಚನೆ

2022ರಲ್ಲಿ ನಾವು ಸೋತಿದ್ದ ವೇಳೆ ದಿನೇಶ್ ಗೂಳಿಗೌಡ ಅವರ ಮೂಲಕ ನಿಡಘಟ್ಟ ಬಳಿ ಪ್ರವೇಶ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಮತ್ತು ಸದನದಲ್ಲಿ ಮನವಿ ಮಾಡಿ ಪ್ರವೇಶ ಕಲ್ಪಿಸಲಾಯಿತು



ಮಂಡ್ಯ, ನ.24: ಬೆಂಗಳೂರು–ಮೈಸೂರು ಹೆದ್ದಾರಿಯ ನಿಡಘಟ್ಟದ ಬಳಿ ಕಲ್ಪಿಸಲಾಗಿರುವ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆಯನ್ನು ಬಂದ್ ಮಾಡಿ ಚನ್ನಪಟ್ಟಣ ಸಮೀಪ ಹೊಸ ಪ್ರವೇಶ?ನಿರ್ಗಮನ ವ್ಯವಸ್ಥೆ ಆರಂಭಿಸುತ್ತಿರುವುದರಿಂದ ಮಂಡ್ಯ, ಮದ್ದೂರು ಭಾಗದ ಜನರು, ವಾಹನ ಸವಾರರು ಹಾಗೂ ಸ್ಥಳೀಯ ಉದ್ಯಮಿಗಳಿಗೆ ತೊಂದರೆಯಾಗಲಿದೆ. ಹೀಗಾಗಿ ನಿಡಘಟ್ಟ ಬಳಿಯ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆಯನ್ನು ಮುಂದುವರೆಸಬೇಕು ಎಂದು ಜಲಸಂಪನ್ಮೂಲ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಸ್ತಾಪಿಸಿದ ಸಚಿವರು, ಈ ಹಿಂದೆ ಹೆದ್ದಾರಿ ನಿರ್ಮಾಣ ಸಂದರ್ಭದಲ್ಲಿ ನಾವು

ಶಾಸಕರಾಗಿರಲಿಲ್ಲ. ನಮ್ಮ ಸರ್ಕಾರವೂ ಇರಲಿಲ್ಲ. ಆಗ ವಿಧಾನಪರಿಷತ್‌ಗೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ ದಿನೇಶ್ ಗೂಳಿಗೌಡ ಅವರ ಮೂಲಕ, ನಿಡಘಟ್ಟದ ಸುತ್ತಮುತ್ತಲಿನ ಗ್ರಾಮಗಳ ಜನರು ಮತ್ತು ವಾಹನ ಸವಾರರಿಗೆ ಅನುಕೂಲವಾಗುವ ದೃಷ್ಟಿಯಿಂದ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು.

ಅದರ ಜೊತೆಗೆ ಕೇಂದ್ರ ಸಚಿವರಾದ ನಿತೀನ್ ಗಡ್ಕರಿ ಅವರಿಗೂ ಮನವಿ ಸಲ್ಲಿಸಲಾಗಿತ್ತು. ಮನವಿಯ ಹಿನ್ನೆಲೆಯಲ್ಲಿ ನಿಡಘಟ್ಟದ ಬಳಿ ಪ್ರವೇಶ ಮತ್ತು ನಿರ್ಗಮನ ವ್ಯವಸ್ಥೆ ಕಲ್ಪಿಸಲಾಗಿತ್ತು. ಆದರೆ ಇದೀಗ ಆ ವ್ಯವಸ್ಥೆಯನ್ನು ಸ್ಥಗಿತಗೊಳಿಸಿ ಚನ್ನಪಟ್ಟಣ ಸಮೀಪ ಎಂಟ್ರಿ?ಎಕ್ಸಿಟ್ ಆರಂಭಿಸುತ್ತಿರುವುದರಿಂದ ಈ ಭಾಗದ ಜನರಿಗೆ ಮತ್ತೆ ಸಮಸ್ಯೆ ಎದುರಾಗಲಿದೆ ಎಂದರು.

ನಿಡಘಟ್ಟದ ಎಂಟ್ರಿ–ಎಕ್ಸಿಟ್ ವಿಚಾರವಾಗಿ ಹೆದ್ದಾರಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ಅಲ್ಲದೆ, ಪ್ರಸ್ತುತ ಇರುವ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಸುವಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ವಹಿಸುವಂತೆ ನಿರ್ದೇಶನ ನೀಡಿದ್ದಾರೆ.

ಡಾ.ಚಂದ್ರಶೇಖರ ಕಂಬಾರರು ಬಹುಮುಖ ಪ್ರತಿಭೆಯ ಸಾಹಿತಿ: ಡಾ.ಕಟ್ಟಿ



ಕಲಬುರಗಿ, ನ. 24: ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರು ಬಹುಮುಖ ಪ್ರತಿಭೆಯ ಸಾಹಿತಿಗಳಾಗಿದ್ದಾರೆ ಎಂದು ಡಾ. ಎಂ.ಬಿ ಕಟ್ಟಿ ಹೇಳಿದರು.

ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ಹಾಗೂ ಶರಣಬಸವ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಹಯೋಗದಲ್ಲಿ ಶ್ರೀಮತಿ ಶಾರದಾಬಾಯಿ ನಾಗೇಂದ್ರಪ್ಪ ಭೈರಪ್ಪ ಸ್ಮರಣಾರ್ಥ ದತ್ತಿ ಕಾರ್ಯಕ್ರಮದಲ್ಲಿ ಡಾ ಚಂದ್ರಶೇಖರ ಕಂಬಾರ ಅವರ ಕುರಿತು ಉಪನ್ಯಾಸ ನೀಡುತ್ತಾ ಡಾ.ಚಂದ್ರಶೇಖರ ಕಂಬಾರ ಅವರು ಕವಿ, ನಾಟಕಕಾರ, ಕಾದಂಬರಿಕಾರ, ಜಾನಪದ ತಜ್ಞ ಹಾಗೂ ಚಲನಚಿತ್ರ ನಿರ್ದೇಶಕರಾಗಿ ಅವರು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಲ್ಲದೆ, ಸಾಹಿತ್ಯದಲ್ಲಿ ಉತ್ತರ ಕರ್ನಾಟಕದ ಮಣ್ಣಿನ ಸೊಗಡು, ಜನಪದ ಜೀವನದ ವೈವಿಧ್ಯತೆ ಹಾಗೂ ಸಾಮಾಜಿಕ ವಾಸ್ತವಗಳು ಜೀವಂತವಾಗಿ ಮೂಡಿ ಬರುತ್ತವೆ.

ಆಧುನಿಕ ಸಾಹಿತ್ಯದ ಅಭಿವ್ಯಕ್ತಿಯೊಂದಿಗೆ ಜಾನಪದ ಪ್ರಾರಂಪ್ರಾರಂಭಿಸಿರುವುದು ಅವರ ಬರವಣಿಗೆಯ ಪ್ರಮುಖ ವೈಶಿಷ್ಟ್ಯವಾಗಿದೆ ಎಂದರು.

ಕಂಬಾರರು ಕಾವ್ಯ, ನಾಟಕ, ಕಾದಂಬರಿ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಅವರ ಪ್ರಮುಖ ಕೃತಿಗಳಲ್ಲಿ 'ಜೋಕುಮಾರಸ್ವಾಮಿ', 'ಸಿರಿಸಂಪಿಗೆ', 'ಕಾಡುಕುದುರೆ', 'ಮಹಾಮಾಯಿ', 'ಚಕೋರಿ' ಮತ್ತು 'ಶಿಖರ ಸೂರ್ಯ' ಪ್ರಮುಖವಾಗಿವೆ. ವಿಶೇಷವಾಗಿ ಅವರ ನಾಟಕಗಳು ಜಾನಪದ ಕಥನಶೈಲಿ, ಸಂಗೀತ, ನೃತ್ಯ ಮತ್ತು ರಂಗಭೂಮಿಯ ಸೃಜನಶೀಲ ಸಂಯೋಜನೆಯಿಂದ ಗಮನ ಸೆಳೆಯುತ್ತವೆ ಎಂದರು.

ಡಾ.ಕುಂಬಾರರ ಕೃತಿಗಳಲ್ಲಿ ಗ್ರಾಮೀಣ ಬದುಕಿನ ಸಂಘರ್ಷ, ಮನುಷ್ಯನ ಆಸೆ–ಆಕಾಂಕ್ಷೆಗಳು, ಅಧಿಕಾರದ ಸ್ವರೂಪ, ಸಾಮಾಜಿಕ ಅಸಮಾನತೆ ಹಾಗೂ ಮಾನವೀಯ ಸಂಬಂಧಗಳು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ಜನಸಾಮಾನ್ಯರ ಭಾಷೆಯನ್ನೇ ಸಾಹಿತ್ಯದ ಅಭಿವ್ಯಕ್ತಿಯ ಮಾಧ್ಯಮವನ್ನಾಗಿಸಿಕೊಂಡಿರುವುದರಿಂದ ಅವರ ಬರವಣಿಗೆಯ ಹೆಗ್ಗಳಿಕೆಯಾಗಿದೆ ಎಂದರು.

ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿರುವ ಕಂಬಾರರು ಕೇವಲ ಸಾಹಿತಿಗಳಲ್ಲ. ಕನ್ನಡದ ಜನಪದ ಸಂಸ್ಕೃತಿಯ ಜೀವಂತ ಪ್ರತಿನಿಧಿಯೂ ಹೌದು. ಮಣ್ಣಿನ ಭಾಷೆ, ಜನರ ಬದುಕು ಮತ್ತು ಸ್ಥಳೀಯ ಸಂಸ್ಕೃತಿಯನ್ನು ಜಾಗತಿಕ ಸಾಹಿತ್ಯದ ಅಭಿವ್ಯಕ್ತಿಯ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಸಾಹಿತ್ಯ ಕೃತಿಗಳು ಮುಂದಿನ ಪೀಳಿಗೆಯ ಬರಹಗಾರರಿಗೆ ಸ್ಫೂರ್ತಿಯಾಗಿವೆ ಎಂದರು.

ಮಹಾದೇವಪ್ಪ ಕಡೇಚೂರ್ ಅಯ್ಯನ ಕಥೆಗಳು ಪುಸ್ತಕ ವಿತರಣಾ ಅಭಿಯಾನಕ್ಕೆ ಚಾಲನೆ

ಕಲಬುರಗಿ, ಟಿ.24– ನಾಡಿನ ಭವಿಷ್ಯವನ್ನು ರೂಪಿಸುವ ಮಕ್ಕಳಿಗೆ ಸಂಸ್ಕೃತಿ ಮತ್ತು ಸಂಸ್ಕಾರ ನೀಡುವ ಮೌಲ್ಯದ ಪಾಠದ ಅಗತ್ಯವಿದೆಯೆಂದು ಹಿರಿಯ ಮಕ್ಕಳ ಸಾಹಿತಿ ಎ.ಕೆ ರಾಮೇಶ್ವರ ಅಭಿಪ್ರಾಯಪಟ್ಟರು.

ಕಲಬುರಗಿಯ ಶ್ರೀಮತಿ ಬಾಲಮ್ಮ ಮಹಾದೇವಪ್ಪ ಕಡೇಚೂರ್ ಟ್ರಸ್ಟ್ ಮತ್ತು ಶರಣ ಶಿರಸಿಗಿಯ ಗ್ರಾಮೀಣ ಕ್ರೀಡಾ ವಸತಿ ಶಾಲೆಯ ಆಶ್ರಯದಲ್ಲಿ ಮಂಗಳವಾರ ನಡೆದ ಸ್ವಾತಂತ್ರ್ಯ ಯೋಧ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಹಾದೇವಪ್ಪ ಕಡೆಚೂರ್ ಅವರು ಮಕ್ಕಳಿಗಾಗಿ ಬರೆದ "ಅಯ್ಯನ ಕಥೆಗಳು " ಕೃತಿಗಳನ್ನು ಶಾಲಾ ಗ್ರಂಥಾಲಯಕ್ಕೆ ವಿತರಿಸುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ ಭಾರತದ ಭವಿಷ್ಯ ನಿಂತಿರುವುದು ಪಂಚಾಂಗದಲ್ಲಿ ಅಲ್ಲ. ಅದು ಆದರ್ಶದ ಮಕ್ಕಳನ್ನು ರೂಪಿಸುವಲ್ಲಿ ಒಳಗೊಂಡಿದೆ. ಅಯ್ಯನ ಕಥೆಗಳು ಕೃತಿ ಸಂಸ್ಕೃತಿ ಸಂಸ್ಕಾರದ ಮತ್ತು ಅನುಭವದ ಸಾರವನ್ನು ಒಳಗೊಂಡ ಸ್ವಾತಂತ್ರ್ಯ ಯೋಧ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮಹಾದೇವಪ್ಪ ಕಡೇಚೂರ್ ಅವರಿಂದ ರಚಿತವಾದ ಮೌಲ್ಯ ಸಾರುವ ಕೃತಿಯಾಗಿದೆ. ಇದನ್ನು ವಿದ್ಯಾರ್ಥಿಗಳು ಓದಿ ನೀತಿ ಕಥೆಗಳಿಂದ ಪ್ರೇರಣೆ ಪಡೆದು ಆದರ್ಶ ಮಕ್ಕಳಾಗಿ ಬೆಳೆಯಬೇಕು ಎಂದರು.



ಓದುವ ಸಂಸ್ಕೃತಿಗೆ ಪ್ರೋತ್ಸಾಹ: ಮಕ್ಕಳಲ್ಲಿ ಓದುವ ಹವ್ಯಾಸವು ಕುಗ್ಗುತ್ತಿದ್ದು ಜೀವನ ಮೌಲ್ಯ ತಿಳಿಸುವ ಪುಸ್ತಕ ಅಪರೂಪವಾಗುವ ಸಂದರ್ಭದಲ್ಲಿ ಅಯ್ಯನ ಕಥೆಗಳು ಕೃತಿಯು ಮಕ್ಕಳಿಗೆ ಆದರ್ಶದ ಜೀವನ ನಡೆಸಲು ಪ್ರೇರಣೆ ನೀಡಬಲ್ಲುದು. ಟ್ರಸ್ಟ್ ನಡೆಸುವ ಈ ಪುಸ್ತಕ ಅಭಿಯಾನ ಕಾರ್ಯಕ್ರಮ ಅತ್ಯಂತ ಶ್ಲಾಘನೀಯ ಕೆಲಸವಾಗಿದ್ದು ನಮ್ಮ ಶಾಲೆಯಲ್ಲಿ ಓದುವ ಹವ್ಯಾಸ ಹೆಚ್ಚಿಸಲು ಇನ್ನು ಮುಂದೆ ಕಥೆ, ಕವನ ಪುಸ್ತಕಗಳನ್ನು ಉತ್ತಮವಾಗಿ ಪ್ರಸ್ತುತ ಪಡಿಸುವ ವಿದ್ಯಾರ್ಥಿಗಳಿಗೆ ಈ ಶಾಲೆಯಲ್ಲಿ ಬಹುಮಾನ ನೀಡುವ ಪ್ರಕ್ರಿಯೆ ಆರಂಭಿಸುವುದಾಗಿ ಗ್ರಾಮೀಣ ಕ್ರೀಡಾ ಮತ್ತು ವಸತಿ ಶಾಲೆಯ ಅಧ್ಯಕ್ಷರಾದ ಸಿ ಎನ್ ಬಾಬಳಗಾಂವ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಆಕಾಶವಾಣಿ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ಡಾ ಸದಾನಂದ ಪೆರ್ಲ ಸ್ವಾಗತಿಸಿ ಪ್ರಸ್ತಾವಿಕ ಭಾಷಣ ಮಾಡಿದರು. ಟ್ರಸ್ಟ್ ನ ಸದಸ್ಯ ಮಹೇಶ್ ಕಡೇಚೂರ್, ಶಾಲೆಯ ಮುಖ್ಯ ಗುರುಗಳಾದ ಸಿದ್ಧರಾಮ ಮುಗಳಿ, ಮಲ್ಲಿಕಾರ್ಜುನ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶಿವಾನಂದ ಕೌದಿ, ಮುಖ್ಯ ಗುರುಗಳಾದ ಜ್ಯೋತಿ ಮೇಲೇಶಿ ಶಿಕ್ಷಕಿರಾದ ವೈಷ್ಣವಿ, ರತಿಕಾ, ಚಂದಮ್ಮ ಶಿಕ್ಷಕರಾದ ಪ್ರಕಾಶ್ ಸಾಲಿಮಠ ಸುಭಾಷ್ ಹಾಗೂ ಜಿ.ಡಿ ನಂದಿಕೂರ್ ಹಾಜರಿದ್ದರು. ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥನೆ ಗೀತೆ ಹಾಡಿದರು ಶಿಕ್ಷಕಿ ಖುಷಿ ಕೋಬಾಳ್ ಕಾರ್ಯಕ್ರಮ ನಿರೂಪಿಸಿದರು. ನಂತರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಿಸಲಾಯಿತು.

ಅಪ್ರಾಪ್ತ ವಯಸ್ಕರ ಮೇಲೆ ಲೈಂಗಿಕ ದೌರ್ಜನ್ಯ: ಅಮೆರಿಕದಲ್ಲಿ ಮೈಸೂರು ಮೂಲದ ಪಿಟೀಲು ವಾದಕ ಭಾಸ್ಕರ್ ಬಂಧನ

ಮೈಸೂರು/ಬೆಂಗಳೂರು, ನ.24: ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದ ಪ್ರಮುಖ ಪಿಟೀಲು ವಾದಕ, ಮೈಸೂರು ಮೂಲದ ಎಚ್.ಎನ್. ಭಾಸ್ಕರ್ (50) ವಿರುದ್ಧ ಅಮೆರಿಕದ ಕ್ಯಾಲಿಫೋರ್ನಿಯಾ ನ್ಯಾಯಾಲಯದಲ್ಲಿ ಅಪ್ರಾಪ್ತರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ನಾಲ್ಕು ಗಂಭೀರ ಕ್ರಿಮಿನಲ್ ಆರೋಪಗಳನ್ನು ದಾಖಲಿಸಲಾಗಿದೆ. ಈ ಪ್ರಕರಣವು ಭಾರತೀಯ ಶಾಸ್ತ್ರೀಯ ಸಂಗೀತ ವಲಯದಲ್ಲಿ ತೀವ್ರ ಸಂಚಲನ ಮೂಡಿಸಿದೆ.

ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೋ ಸುಪೀರಿಯರ್ ಕೋರ್ಟ್‌ನಲ್ಲಿ ನವೆಂಬರ್ 6ರಂದು ಈ ದೂರು ದಾಖಲಾಗಿದೆ. ನ್ಯಾಯಾಲಯದ ಆನ್‌ಲೈನ್ ದಾಖಲೆಗಳ ಪ್ರಕಾರ, ಸೆಪ್ಟೆಂಬರ್ 4ರಿಂದ ಸೆಪ್ಟೆಂಬರ್ 26ರ ನಡುವಿನ ಅವಧಿಯಲ್ಲಿ 18 ವರ್ಷದೊಳಗಿನ ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಭಾಸ್ಕರ್ ಮೇಲಿದೆ. ದೂರಿನಲ್ಲಿ ಎರಡು ಪ್ರಕರಣಗಳು ಅಪ್ರಾಪ್ತರೊಂದಿಗೆ ಬಲವಂತದ ಅಸ್ವಾಭಾವಿಕ ಲೈಂಗಿಕ ಕ್ರಿಯೆ ಮತ್ತು ಇನ್ನೆರಡು ಪ್ರಕರಣಗಳು ವಿದೇಶಿ ವಸ್ತುವಿನ ಬಳಕೆಯ ಮೂಲಕ ಲೈಂಗಿಕ ದೌರ್ಜನ್ಯ ನಡೆಸಿದ ಗಂಭೀರ ಆರೋಪಗಳನ್ನು ಒಳಗೊಂಡಿವೆ.

ದೂರು ದಾಖಲಾದ ನವೆಂಬರ್ 6ರಂದೇ ನ್ಯಾಯಾಲಯವು ಭಾಸ್ಕರ್ ವಿರುದ್ಧ ಬಂಧನ ವಾರಂಟ್ ಜಾರಿಗೊಳಿಸಿದೆ. ಸ್ಯಾನ್ ಡಿಯಾಗೋ ಸುಪೀರಿಯರ್ ಕೋರ್ಟ್ ಈ ನಾಲ್ಕು ಆರೋಪಗಳನ್ನು ದೃಢಪಡಿಸಿದ್ದು, ನವೆಂಬರ್ 21ರವರೆಗೂ ಭಾಸ್ಕರ್ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿಲ್ಲ ಹಾಗೂ ಅವರ ವಿಚಾರಣೆಯ ದಿನಾಂಕ ಇನ್ನೂ ನಿಗದಿಯಾಗಿಲ್ಲ ಎಂದು ತಿಳಿಸಿದೆ.

ನ್ಯಾಯಾಲಯದ ಅಧಿಕೃತ ದಾಖಲೆಗಳಲ್ಲಿ ಬಂಧನದ ಸ್ಥಳ ಸ್ಪಷ್ಟವಾಗಿಲ್ಲದಿದ್ದರೂ, ಮೂಲಗಳ ಪ್ರಕಾರ ಭಾಸ್ಕರ್ ಪ್ರಸ್ತುತ ಮ್ಯಾಸಚೂಸೆಟ್ಸ್‌ನ



ಬೋಸ್ಟನ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಕ್ಯಾಲಿಫೋರ್ನಿಯಾ ನ್ಯಾಯಾಲಯದ ಸಾರ್ವಜನಿಕ ಸಂಪರ್ಕ ಕಚೇರಿಯು ಇದನ್ನು ಅಲ್

ಗಣಿಗಾರಿಕೆ ನಿಷೇಧಿತ ಬಫರ್ ವಲಯ ತುರ್ತಾಗಿ ಆಗಲಿ



ಬೀದರ್, ನ. 24: ಬೀದರ್ ನಗರವೂ ಸೇರಿದಂತೆ ಜಿಲ್ಲೆಯಲ್ಲಿರುವ ಜಲಮೂಲಗಳು, ಹುಲ್ಲುಗಾವಲು ಹಾಗೂ ನೈಸರ್ಗಿಕವಾಗಿರುವ ಬೆಟ್ಟಗುಡ್ಡಗಳ ರಕ್ಷಣೆಗಾಗಿ ಅವುಗಳ ಸುತ್ತಮುತ್ತಲಿನ ನಿರ್ದಿಷ್ಟ ಪ್ರದೇಶವನ್ನು ಜಿಲ್ಲಾಡಳಿತವು ನಿಷೇಧಿತ ವಲಯವಾಗಿ ಘೋಷಿಸಬೇಕು ಎಂದು 'ಟೀಮ್ ಯುವಾ' ಸಂಚಾಲಕರೂ ಆದ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ವಿನಯ್ ಕುಮಾರ್ ಮಾಳಗೆ ಅವರು ಅಧ್ಯಯನ ನಡೆಸಿ, ಜಿಲ್ಲಾಡಳಿತಕ್ಕೆ ಸಲ್ಲಿಸಿರುವ ವರದಿಯಲ್ಲಿ ಪರಿಸರ ಸಂರಕ್ಷಣೆಗೆ ಸಲಹೆ ಮಾಡಿದ್ದಾರೆ.

ಅವ್ಯಾಹತವಾಗಿ ನಡೆಯುತ್ತಿರುವ ಕಲ್ಲು ಮತ್ತು ಮಣ್ಣು ಗಣಿಗಾರಿಕೆಯಿಂದ ನೈಸರ್ಗಿಕವಾಗಿರುವ ಗುಡ್ಡಗಳನ್ನು ನಾಶಪಡಿಸಿ, ಜಲಮೂಲಗಳನ್ನು ನಾಶಪಡಿಸಲಾಗುತ್ತಿದೆ ಎಂದು ಈ ಕುರಿತು ಮಾಧ್ಯಮಗಳು ವರದಿ ಮಾಡಿದ್ದವು. ಬಳಿಕ ಸಚಿವರು, ಪರಿಸರ ಮತ್ತು ಜಲ ಸಂರಕ್ಷಣೆಗೆ ಶ್ರಮಿಸುತ್ತಿರುವ 1ಟೀಮ್ ಯುವಾ' ಸಂಸ್ಥೆಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿ, ಹೊಣೆ ವಹಿಸಿದ್ದರು. ಸಂಸ್ಥೆಯು ಕ್ಷೇತ್ರ ಭೇಟಿ ಹಾಗೂ ಡ್ರೋನ್ ಸಮೀಕ್ಷೆಯ ಮೂಲಕ ವೈಜ್ಞಾನಿಕ ಮತ್ತು ಕಾನೂನಾತ್ಮಕ ಅಂಶಗಳನ್ನೊಳಗೊಂಡ ಪ್ರಾಥಮಿಕ ವರದಿ ಸಲ್ಲಿಸಿದೆ. ಪಶ್ಚಿಮ ಘಟ್ಟಗಳ ಮಾದರಿಯಲ್ಲಿ ಕೆರೆಗಳ ಜಲಾನಯನ ಪ್ರದೇಶ, 'ಕರೇಜ್' ಜಲಮೂಲ, ಹುಲ್ಲುಗಾವಲು ಗಳ ಸುತ್ತ 'ಗಣಿಗಾರಿಕೆ ನಿಷೇಧಿತ ಬಫರ್ ವಲಯ' ಎಂದು ಘೋಷಿಸ ಬೇಕು. ತಪ್ಪಿತಸ್ಥರಿಂದಲೇ ಹಾನಿ ಭರಿಸಿ, ಹಾನಿಗೊಳಗಾದ ನೈಸರ್ಗಿಕ ಗುಡ್ಡಗಳನ್ನು ಪುನಶ್ಚೇತನ ಗೊಳಿಸಬೇಕು ಎಂದು ಶಿಫಾರಸು ಮಾಡಿದೆ.

ಗಣಿ ಮತ್ತು ಭೂವಿಜ್ಞಾನ, ಕಂದಾಯ, ಅರಣ್ಯ, ಮಾಲಿನ್ಯ ನಿಯಂತ್ರಣ ಮಂಡಳಿ, ಸಣ್ಣ ನೀರಾವರಿ, ಪೊಲೀಸ್, ಪಾಲಿಕೆ ಮತ್ತು ಪಿಡಿಒಗಳನ್ನೊಳಗೊಂಡ ಜಂಟಿ ತಂಡದಿಂದ ಡ್ರೋನ್/ಡಿಜಿಪಿಎಸ್ ಮೂಲಕ ನಷ್ಟದ ಅಳತೆ ಮಾಡಬೇಕು. ಎಂಎಂಡಿಆರ್ ಕಾಯ್ದೆ ಸೆಕ್ಷನ್ 21 ಮತ್ತು ಭಾರತೀಯ ನ್ಯಾಯಸಂಹಿತೆ (ಬಿಎನ್ಎಸ್) ಅಡಿಯಲ್ಲಿ ಎಫ್ಐಆರ್ ದಾಖಲಿಸಿ, ಉತ್ಖನನೋಪಕರಣಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಹಾಗೂ ಅಕ್ರಮವಾಗಿ ಸಾಗಿಸಿದ ಖನಿಜದ ಮೌಲ್ಯ ಮತ್ತು ದಂಡ ವಸೂಲಿ ಮಾಡಬೇಕೆಂದು ವರದಿಯಲ್ಲಿ ಸಲಹೆ ಮಾಡಲಾಗಿದೆ.

ಐಐಎಸ್ಸಿ, ಐಐಟಿ ಹೈದರಾಬಾದ್, ಸಿಇಪಿಟಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಮತ್ತು ಜಿಎಸ್ಐ ತಜ್ಞರ ನೆರವಿನೊಂದಿಗೆ ವೈಜ್ಞಾನಿಕ ಆಡಿಟ್ ನಡೆಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾರ್ಯಪಡೆ' ರಚಿಸಬೇಕು. ನರೇಗಾ ಯೋಜನೆಯ ಮಾದರಿಯಲ್ಲಿ ಜಿಯೋ-ಟ್ಯಾಗ್ ಮಾಡಿದ ಡ್ರೋನ್ ಮತ್ತು ಉಪಗ್ರಹ ಚಿತ್ರಗಳ ಮೂಲಕ ನಿರಂತರ ನಿಗಾ ವಹಿಸಬೇಕು.

30 ದಿನಗಳೊಳಗೆ ಕೈಗೊಂಡ ಕ್ರಮಗಳ ವರದಿ ನೀಡುವಂತೆ ಜಿಲ್ಲಾಡಳಿತವನ್ನು ಕೋರಲಾಗಿದೆ. ವಿಳಂಬವಾದಲ್ಲಿ ಸಾರ್ವಜನಿಕ ಹಿತಾಸಕ್ತಿ ರಕ್ಷಣೆಗಾಗಿ ಹೈಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್ಜಿಟಿ) ಮತ್ತು ಲೋಕಾಯುಕ್ತರ ಮೊರೆ ಹೋಗಲಾ ಗುವುದು ಎಂದು ವರದಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಕರೇಜ್ ವ್ಯವಸ್ಥೆಗೆ ಕುತ್ತು: ಲಕ್ಷಾಂತರ ವರ್ಷಗಳಿಂದ ರೂಪುಗೊಂಡಿರುವ ಬೀದರ್‌ನ ರಂಧ್ರಯುಕ್ತ ಲ್ಯಾಟರೈಟ್ ಪದರವು ಮಳೆನೀರನ್ನು ಹೀರಿಕೊಳ್ಳುವ ಸ್ಪಂಜಿನಂತೆ ಕೆಲಸ ಮಾಡುತ್ತದೆ. ಇದನ್ನು ನಾಶಪಡಿಸುವುದರಿಂದ ಬಾವಿ, ಕೊಳವೆಬಾವಿಗಳು ಬತ್ತಿಹೋಗ ಲಿದ್ದು, ಐತಿಹಾಸಿಕ 'ಕರೇಜ್' (ಸುರಂಗ ಬಾವಿ) ಜಲಮೂಲಗಳು ಶಾಶ್ವತವಾಗಿ ಬರಿದಾಗುವ ಅಪಾಯವಿದೆ ಎಂದು ವರದಿ ತಿಳಿಸಿದೆ.

ಪ್ರಸ್ಥಭೂಮಿಯ ಹುಲ್ಲುಗಾವಲುಗಳ ನಾಶದಿಂದ ಕೃಷ್ಣಮೃಗ, ತೋಳ ಮತ್ತು ನವಿಲುಗಳಂತಹ ವನ್ಯಜೀವಿಗಳ ಆವಾಸಸ್ಥಾನಕ್ಕೆ ಧಕ್ಕೆಯಾಗಿದೆ.

ಕಾಂಗ್ರೆಸ್‌ನ ನಕಲಿ ಭರವಸೆಗಳಿಗೆ ಜನರು ಮೋಸ ಹೋಗಿದ್ದಾರೆ-ರಶ್ಮಿ ರಾಮೇಗೌಡ ಅನುಕಂಪ



ಬಳ್ಳಾರಿ, ನ .24: ಕಾಂಗ್ರೆಸ್ ನ ಡೂಪ್ಲಿಕೇಟ್ ಭರವಸೆಗಳಿಗೆ ಜನರು ಮೋಸ ಹೋಗಿದ್ದು, ಇನ್ಮುಂದೆ ಅಂತಹ ತಪ್ಪು ಮಾಡಬೇಡಿ, ಪ್ರತಿಯೊಬ್ಬರೂ ಜನಪರ ಕಾಳಜಿಯುಳ್ಳ ಎಲ್ಲ ವರ್ಗದವರ ಅಭಿವೃದ್ಧಿಗೆ ಶ್ರಮಿಸುವ ಜೆಡಿಎಸ್ ಬೆಂಬಲಿಸಿ ಆಶೀರ್ವದಿಸಬೇಕು ಎಂದು ಜೆಡಿಎಸ್ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ ಅವರು ಹೇಳಿದರು. ನಗರದ ಜೆಡಿಎಸ್ ಜಿಲ್ಲಾ ಕಚೇರಿ ಆವರಣದಲ್ಲಿ ಸೋಮವಾರ ಸಂಜೆ ಆಯೋಜಿಸಿದ್ದ ಪದಾಧಿಕಾರಿಗಳ ಸಭೆ ಹಾಗೂ ಸಂಘಟನಾ ಸಭೆಗೆ ಚಾಲನೆ ನೀಡಿ ಮಾತನಾಡಿದರು.

ರೈತರು, ಮಹಿಳೆಯರು, ಬಡವರ ಪರ ಕಾಳಜಿ ಇಟ್ಟುಕೊಂಡು ಹೋರಾಟ ಮಾಡ್ಕೊಂಡು ಬಂದ ಜೆಡಿಎಸ್ ಪಕ್ಷದ ಕೈ ಬಲಪಡಿಸಬೇಕು. ಕುಮಾರಣ್ಣ ಅವರು, ಅವಧಿಯಲ್ಲಿ 5 ಪಂಚರತ್ನ ಯೋಜನೆಗಳನ್ನು ಜಾರಿ ತಂದಿದ್ದರು, ಅದರಲ್ಲಿ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಜನಪರ ಕಾರ್ಯಕ್ರಮವನ್ನು ಜಾರಿ ತಂದಿದ್ದರು. ಬಡ ಮಕ್ಕಳು ಎಲ್ಲರಂತೆ ಹೈಟೆಕ್ ಶಾಲೆಯಲ್ಲಿ ಕಲಿಯಬೇಕು ಎನ್ನುವ ಕನಸನ್ನು ಇಟ್ಟುಕೊಂಡಿದ್ದ ಕುಮಾರಣ್ಣ ಅವರು ನಾನಾ ಯೋಜನೆಗಳನ್ನು ಜಾರಿಗೆ ತಂದಿದ್ದರು. ನಮ್ಮ ಎಲ್ಲ ಮಕ್ಕಳಿಗೂ ಹೈಟೆಕ್ ಶಾಲೆಯಲ್ಲಿ ಶಿಕ್ಷಣ ಕಲ್ಪಿಸಲು ಶ್ರಮ ವಹಿಸಿದ್ದರು.

ಕಾಂಗ್ರೆಸ್ ಕೊಟ್ಟ ಡೂಪ್ಲಿಕೇಟ್ ಭರವಸೆಗಳನ್ನು ನಂಬಿ ಜನ ಮೋಸ ಹೋಗಿ ಅಧಿಕಾರಕ್ಕೆ ತಂದರು. ಆದರೆ, ಅವರ ಕೊಡುಗೆ ಸಾಲಭಾಗ್ಯ, ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ನಮ್ಮೆಲ್ಲರನ್ನೂ ಸಾಲದ ಕೂಪಕ್ಕೆ ತಳ್ಳಿದ್ದಾರೆ.

ಜನಪರ ಕಾಳಜಿಯುಳ್ಳವರನ್ನು ಜನರು ಬೆಂಬಲಿಸಿ ಆಶ್ರಿವಾದಿಸಬೇಕು, ಬರುವ 2028ರ ಚುನಾವಣೆಯಲ್ಲಿ ಎನ್ ಡಿಎ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು, ಅಧಿಕಾರಕ್ಕೆ ತರಬೇಕು ಮನವಿ ಮಾಡಿದರು. ಬಿಗ್ ಖ್ಯಾತಿಯ ನಟಿ, ಜೆಡಿಎಸ್ ಮಹಿಳಾ ಘಟಕದ ಜಾಹ್ನವಿ ಮಾತನಾಡಿ, ಜೆಡಿಎಸ್ ನ್ನು ಜಿಲ್ಲೆಯಲ್ಲಿ ಗಟ್ಟಿಯಾಗಿ ಉಳಿಸಿದ, ತಾಯಿ ಹೃದಯದ ಸ್ವರೂಪಿ, ತಾಯಣ್ಣ ಅವರ ಕೈ ಬಲಪಡಿಸಬೇಕು. ನಮ್ಮ ಪಕ್ಷದ ಚಿಹ್ನೆ ತೆನೆ ಹೊತ್ತ ಮಹಿಳೆ, ಮಹಿಳಾ ಮೀಸಲಾತಿ ಬಿಲ್ ಪಾಸಾದರೆ, ಎಲ್ಲರಿಗೂ ಅವಕಾಶ ಸಿಗಲಿದೆ. ಬೆಲೆ ಏರಿಕೆ ಭಾಗ್ಯ ಕರುಣಿಸಿದ ಕಾಂಗ್ರೆಸ್ ಗೆ ಜನರು ತಕ್ಕ ಪಾಠ ಕಲಿಸಬೇಕು, ದುರಾಡಳಿತದ ವಿರುದ್ಧ ಧ್ವನಿ ಎತ್ತಬೇಕು, ಜನರ ಆಶೀರ್ವಾದ ದಿಂದ 2028ಕ್ಕೆ ಕುಮಾರಣ್ಣ ಅವರು ಮತ್ತೆ ಸಿ.ಎಂ.ಆಗ್ತಾರೆ ಚಿಂತೆ ಬೇಡ ಎಂದರು.

ಕಲಬುರಗಿ-ಬೆಂಗಳೂರು ವಿಮಾನಕ್ಕೆ ಭರ್ಜರಿ ಸ್ಪಂದನೆ: ಶೇ.80ರಷ್ಟು ಸೀಟು ಭರ್ತಿ



ಕಲಬುರಗಿ, ನ. 24: ಸ್ಟಾರ್ ಏರ್ ವಿಮಾನ ಸಂಸ್ಥೆಯು ಕಲಬುರಗಿ ಯಿಂದ ರಾಜಧಾನಿ ಬೆಂಗಳೂರಿಗೆ ಜೂನ್ 10ರಿಂದ ವಿಮಾನ ಸೇವೆಯನ್ನು ಪುನರಾರಂಭ ಗೊಳಿಸಿದ್ದು, ಸರಾಸರಿ ಶೇ 80ರಷ್ಟು ಪ್ರಯಾಣಿಕರು ನಿತ್ಯ ಸಂಚರಿಸುವ ಮೂಲಕ ಉತ್ತಮ ಸ್ಪಂದನೆ ತೋರಿದ್ದಾರೆ.

ಬೆಂಗಳೂರು-ಬೀದರ್ ಮಧ್ಯೆ ವಿಮಾನಯಾನ ಸೇವೆ ನೀಡುತ್ತಿದ್ದ ಸ್ಟಾರ್ ಏರ್ ಸಂಸ್ಥೆಯು ಕೆಕೆಆರ್‌ಡಿಬಿ ನಷ್ಟ ಭರ್ತಿ ಅನುದಾನ (ವಯೆಬಲ್ ಗ್ಯಾಪ್ ಫಂಡ್) ನೀಡಿದ ಹೊರ ತಾಗಿಯೂ ಪ್ರಯಾಣಿಕರ ಉತ್ತಮ ಸ್ಪಂದನೆ ಇಲ್ಲದಿರುವುದರಿಂದ ನ.1ರಿಂದ ತನ್ನ ಸೇವೆಯನ್ನು ಏಕಾಏಕಿ ಸ್ಥಗಿತಗೊಳಿ ಸಿದೆ. ಆದರೆ ಪ್ರಯಾಣಿಕರಿಂದ ಭರ್ಜರಿ ಸ್ಪಂದನೆ ಸಿಗುತ್ತಿರುವುದರಿಂದ ಕಲಬುರಗಿ-ಬೆಂಗಳೂರು ಮಧ್ಯೆ ಸಂಸ್ಥೆಯು ವಿಮಾನ ಸೇವೆಯನ್ನು ಮಾತ್ರ ಮುಂದುವರಿಸಿದೆ.

ನಿತ್ಯ ಸಂಚರಿಸುವ ಸ್ಟಾರ್ ಏರ್ ವಿಮಾನವು 76 ಸೀಟುಗಳನ್ನು ಹೊಂದಿದ್ದು, ವಾರಾಂತ್ಯದ ದಿನಗಳಲ್ಲಿ ಬಹುತೇಕ ಭರ್ತಿಯಾಗಿ ಸಂಚರಿಸುತ್ತಿದೆ. ಅಲ್ಲದೇ ಅನೇಕ ಬರಿ ಟಿಕೆಟ್ ದೊರೆಯದೇ ಜನರು ಪರದಾಡುವಂತೆ ಮಾಡುತ್ತದೆ. ಜೂನ್ 10ರಂದು ಪುನರರಂಭದ ಸೇವೆಯ ಈ ವಿಮಾನದ ಮೂಲಕ 63 ಪ್ರಯಾಣಿಕರು ನಗರಕ್ಕೆ ಬಂದಿದ್ದರು. ಅದೇ ದಿನ ಬೆಂಗಳೂರಿಗೆ 46 ಜನ ಪ್ರಯಾಣಿಸಿದ್ದರು. ಜೂನ್ 26ರಂದು 66 ಪ್ರಯಾಣಿಕರು ಕಲಬುರಗಿಗೆ ಬಂದಿದ್ದರೆ, ವಾಪಸ್ 70 ಪ್ರಯಾಣಿಕರು ತೆರಳಿದ್ದರು. ಅ.30ರಂದು 75 ಪ್ರಯಾಣಿಕರು ನಗರಕ್ಕೆ ಬಂದಿದ್ದರೆ, ಬೆಂಗಳೂರಿಗೆ 73 ಪ್ರಯಾಣಿಕರು ಹೊರಟಿದ್ದರು. ಒಟ್ಟಾರೆ 148 ಪ್ರಯಾಣಿಕರು ಈ ವಿಮಾನದ ಸೇವೆ ಪಡೆದುಕೊಂಡಿದ್ದು ಇದುವರೆಗಿನ ಗರಿಷ್ಠ ಪ್ರಯಾಣಿಕರ ದಾಖಲೆಯಾಗಿದೆ. ನ.19ರಂದು 56 ಪ್ರಯಾಣಿಕರು ಕಲಬುರಗಿಗೆ ಬಂದಿದ್ದರೆ, ಬೆಂಗಳೂರಿಗೆ 76 ಜನ ತೆರಳಿದ್ದರು ಎಂಬುದು ವಿಮಾನ ನಿಲ್ದಾಣದ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ.

ಕಲಬುರಗಿಯಲ್ಲಿ ನಾಲ್ಕು ವೈದ್ಯಕೀಯ ಕಾಲೇಜುಗಳು, ಡೆಂಟಲ್, ಫಾರ್ಮಸಿ ಕಾಲೇಜುಗಳು, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳು, ನಾಲ್ಕು ವಿಶ್ವವಿದ್ಯಾಲಯಗಳು, ಎಂಜಿನಿಯರಿಂಗ್ ಕಾಲೇಜುಗಳು, ಪ್ರಮುಖ ಸರ್ಕಾರಿ ಕಚೇರಿಗಳು ಇರುವುದರಿಂದ ಹಾಗೂ ಕಲಬುರಗಿ ಕಲ್ಯಾಣ ಕರ್ನಾಟಕದ ಕೇಂದ್ರ ಸ್ಥಾನವೂ ಆಗಿರುವುದರಿಂದ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರು ವಿಮಾನದ ಮೂಲಕ ಬರುತ್ತಾರೆ.

ಬೆಂಗಳೂರು-ಬೀದರ್ ಮಧ್ಯೆ ಪ್ರಯಾಣಿಸುತ್ತಿದ್ದ ವಿಮಾನಕ್ಕೆ ಇತ್ತೀಚಿನ ದಿನಗಳಲ್ಲಿ ಪ್ರಯಾಣಿಕರ ಕೊರತೆಯೇ ಸೇವೆ ಸ್ಥಗಿತಗೊಳಿಸಲು ಪ್ರಮುಖ ಕಾರಣವೆಂದು ಮೂಲಗಳು ತಿಳಿಸಿವೆ. 76 ಸೀಟಿನ ಸ್ಟಾರ್ ಏರ್ ವಿಮಾನದಲ್ಲಿ ನಿತ್ಯ ಸರಾಸರಿ 30ರಿಂದ 35 ಸೀಟು ಮಾತ್ರ ಭರ್ತಿಯಾಗುತ್ತಿದ್ದವು. ಕನಿಷ್ಠ 50 ಸೀಟುಗಳಾದರೂ ಭರ್ತಿಯಾದರೆ ವಿಮಾನದ ಇಂಧನ ವೆಚ್ಚ, ಪೈಲಟ್, ಗಗನಸಖಿಯರ ವೇತನ, ನಿರ್ವಹಣಾ ವೆಚ್ಚಗಳನ್ನು ಸರಿದೂಗಿಸಬಹುದಾಗಿದೆ. ಪ್ರಯಾಣಿಕರ ಸಂಖ್ಯೆ ಕಡಿಮೆಯಾದ ಹಿನ್ನೆಲೆಯಲ್ಲಿ ಹೆಚ್ಚಿನ ನಷ್ಟ ಭರ್ತಿಗೆ ಬೇಡಿಕೆ ಇಟ್ಟು ಕಂಪನಿಯು ವಿಮಾನ ಸೇವೆಯನ್ನು ಸ್ಥಗಿತಗೊಳಿಸಿರುವ ಸಾಧ್ಯತೆಯಿದೆ ಎಂದು ಅಧಿಕಾರಿ ಯೊಬ್ಬರು ಮಾಹಿತಿ ನೀಡಿದರು.

ಬೆಳಗಿನ ವಿಮಾನಕ್ಕೆ ಹೆಚ್ಚಿದ ಬೇಡಿಕೆ

ಕಲ್ಯಾಣ ಕರ್ನಾಟಕದಲ್ಲೇ ಅತ್ಯಂತ ಸುಸಜ್ಜಿತ ವಿಮಾನ ನಿಲ್ದಾಣ ಹೊಂದಿರುವ ಕಲಬುರಗಿಗೆ ಸದ್ಯ ಸಂಜೆ ಮಾತ್ರ ಬೆಂಗಳೂರಿನಿಂದ ವಿಮಾನ ಸೇವೆ ಇದೆ. ಬೆಳಿಗ್ಗೆಯೂ ವಿಮಾನ ಸಂಚಾರ ಶುರುವಾದರೆ ಬೆಳಿಗ್ಗೆ ಕೆಲಸ ಮುಗಿಸಿಕೊಂಡು ಸಂಜೆ ನಗರಕ್ಕೆ ವಾಪಸ್ ಮರಳಬಹುದಾಗಿದೆ. ಈ ಹಿಂದೆ ಬೆಳಿಗ್ಗೆ ಮತ್ತು ಸಂಜೆ ಎರಡೂ ಸಮಯ ವಿಮಾನ ಸಂಚಾರವಿತ್ತು. ಅದನ್ನು ಮತ್ತೆ ಶುರು ಮಾಡಬೇಕು ಎನ್ನುತ್ತಾರೆ ಪ್ರಯಾಣಿಕರು. 5701 ಟಿಕೆಟ್: ಕಲಬುರಗಿ-ಬೆಂಗಳೂರು ಮಧ್ಯೆ ಪ್ರಯಾಣಿಸಲು ಸಂಸ್ಥೆಯು ಎಕಾನಮಿ ದರ್ಜೆಗೆ 5701 ಹಾಗೂ ಬಿಜಿನೆಸ್ ಕ್ಲಾಸ್‌ಗೆ 9899 ದರವನ್ನು ನಿಗದಿ ಮಾಡಿದೆ. ಆಯ್ಕೆಯ ಸೀಟು, ಲಗೇಜ್ ಇತರ ಸೇವಾ ಶುಲ್ಕಗಳು ಸೇರಿದಂತೆ ಈ ಮೊತ್ತ ಇನ್ನೂ ಹೆಚ್ಚಾಗಲಿದೆ. ಇಷ್ಟಾಗಿಯೂ ಬೇಡಿಕೆ ಕಡಿಮೆಯಾಗಿಲ್ಲ. ಇತ್ತೀಚೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲಸೌಕರ್ಯ ಸಚಿವ ಎಂ.ಬಿ. ಪಾಟೀಲ ನೇತೃತ್ವದಲ್ಲಿ ವಿವಿಧ ನಗರಗಳಿಗೆ ವಿಮಾನ ಪ್ರಯಾಣ ಶುರು ಮಾಡುವ ಕುರಿತಂತೆ ವಿಮಾನಯಾನ ಸಂಸ್ಥೆಗಳ ಪ್ರತಿ ನಿಧಿಗಳೊಂದಿಗೆ ಸಭೆ ನಡೆಸಲಾಗಿದೆ. ಕಲಬುರಗಿಗೆ ಬೆಳಿಗ್ಗೆ ವಿಮಾನ ಸಂಚಾರ ಪ್ರಾರಂಭಿಸುವಂತೆ ಸಂಸ್ಥೆಗಳಿಗೆ ಸಲಹೆ ನೀಡಲಾಗಿದೆ. ಕಲಬುರಗಿ ವಿಮಾನ ನಿಲ್ದಾಣದಿಂದ ಮುಂಬೈ, ದೆಹಲಿ ಸಮೀಪದ ಹಿಂಡನ್, ತಿರುಪತಿಗೆ ವಿಮಾನಯಾನ ಸೇವೆ ಮೊದಲು ಇದ್ದುದನ್ನು ಹಿಂತೆಗೆದುಕೊಳ್ಳಲಾಗಿದೆ. ಅದನ್ನು ಮತ್ತೆ ಶುರು ಮಾಡಿದರೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಈ ಕುರಿತು ಜನಪ್ರತಿನಿಧಿಗಳು ಒತ್ತಡ ತರಬೇಕು ಎನ್ನುತ್ತಾರೆ ನಿವೃತ್ತ ಎಂಜಿನಿಯರ್ ವೆಂಕಟೇಶ ಮುದಗಲ್.



ಗುರುನಾನಕ್ ದೇವ್ ಅವರ 557ನೇ ಜನ್ಮದಿನವನ್ನು ಆಚರಿಸಲು, ಕರ್ನಾಟಕದಾದ್ಯಂತ ಹಾಗೂ ನೆರೆಯ ರಾಜ್ಯಗಳಿಂದ ಭಕ್ತರು ಮಂಗಳವಾರ ಬೀದರ್‌ನ ಗುರುದ್ವಾರ ನಾನಕ್ ಝೀರಾ ಸಾಹಿಬ್‌ನಲ್ಲಿ ಜಮಾಯಿಸಿದ್ದರು. ಈ ಸಂದರ್ಭದಲ್ಲಿ ವಿಶೇಷ ಪ್ರಾರ್ಥನೆ, ಕೀರ್ತನ ದರ್ಬಾರ್ ಮತ್ತು 'ಗುರು ಕಾ ಲಂಗರ್' (ಸಾಮುದಾಯಿಕ ಭೋಜನ) ವಿಪ್ಪಡಿಸಲಾಗಿತ್ತು.

ರಸ್ತೆ ಒತ್ತುವರಿ ತೆರವು, ಅಡ್ಡಾದಿಡ್ಡಿ ವಾಹನ ನಿಲುಗಡೆಗೆ ಪೊಲೀಸರ ಎಚ್ಚರಿಕೆ



ಕಲಬುರಗಿ, ನ. 24: ನಗರದ ಸುಗಮ ಸಂಚಾರಕ್ಕೆ ಅಡ್ಡಿಯಾಗಿದ್ದ ರಸ್ತೆ ಒತ್ತುವರಿ ಹಾಗೂ ಅಡ್ಡಾದಿಡ್ಡಿ ವಾಹನ ನಿಲುಗಡೆ ತೆರವುಗೊಳಿಸಲು ಸಂಚಾರಿ ಪೊಲೀಸರು ಇಂದು ಬೆಳಿಗ್ಗೆಯಿಂದಲೇ ಕಾರ್ಯಾಚರಣೆ ನಡೆಸಿದರು. ನಗರದ ರಫಿಕ್ ಚೌಕ್‌ನಿಂದ ಮಣ್ಣೂರ್ ಆಸ್ಪತ್ರೆ ಯವರೆಗಿನ ಸೇವಾ ರಸ್ತೆಯಲ್ಲಿ ಈ ಕಾರ್ಯಾಚರಣೆ ಕೈಗೊಳ್ಳಲಾಯಿತು.

ರಸ್ತೆ ಬದಿಯಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ನಿಲುಗಡೆ ಮಾಡುವುದು ಹಾಗೂ ಸಾರ್ವಜನಿಕರು ರಸ್ತೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದ ರಿಂದ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿದ ಸಂಚಾರಿ ಠಾಣೆ ಪೊಲೀಸರು ರಸ್ತೆ ಒತ್ತುವರಿ ತೆರವು ಗೊಳಿಸುವುದರ ಜತೆಗೆ, ಅಕ್ರಮವಾಗಿ ವಾಹನ ನಿಲುಗಡೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ಸಂಚಾರಿ ಠಾಣೆಯ ಸಹಾಯಕ ಪೊಲೀಸ್ ಆಯುಕ್ತ ಪ್ರಭು ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಸಾರ್ವಜನಿಕರು ರಸ್ತೆಗಳನ್ನು ಒತ್ತುವರಿ ಮಾಡಿಕೊಳ್ಳದೆ, ವಾಹನಗಳನ್ನು ನಿಗದಿತ ಸ್ಥಳಗಳಲ್ಲಿಯೇ ನಿಲುಗಡೆ ಮಾಡಬೇಕು ಎಂದು ಪೊಲೀಸರು ಸೂಚಿಸಿದರು. ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲಿ ವಾಹನ ನಿಲುಗಡೆ ಮಾಡುವುದು ಅಥವಾ ರಸ್ತೆ ಒತ್ತುವರಿ ಮುಂದುವರಿಸುವುದು ಕಂಡುಬಂದರೆ ದಂಡ ವಿಧಿಸಲಾಗುವುದು ಎಂದು ಸಹಾಯಕ ಪೊಲೀಸ್ ಆಯುಕ್ತ ಪ್ರಭು ಎಚ್ಚರಿಕೆ ನೀಡಿದರು.

ಕೊಳವೆಬಾವಿ ಕೊರೆಸಲು ಕಳೆದ ವರ್ಷದ ದರವೇ ಮುಂದುವರಿಕೆ ಬೋರ್‌ವೆಲ್ ಲಾರಿ ಮಾಲೀಕರಿಗೆ ಸಚಿವ ಬಸವಂತಪ್ಪ ಸೂಚನೆ

ದಾವಣಗೆರೆ, ನ.24: ಸಚಿವ ಕೆ.ಎಸ್.ಬಸವಂತಪ್ಪ ಅವರು ಜಿಲ್ಲಾಧಿಕಾರಿ ಡಾ.ಜಿ.ಎಂ.ಗಂಗಾಧರ ಸ್ವಾಮಿ ಅವರ ನೇತೃತ್ವದಲ್ಲಿ ಬರ ನಿರ್ವಹಣೆ ಹಾಗೂ ಕುಡಿಯುವ ನೀರಿನ ಪರಿಶೀಲನಾ ಸಭೆ ಹಾಗೂ ರಿಗ್ (ಬೋರ್ ವೆಲ್ ಕೊರೆಯುವ ಲಾರಿ) ಮಾಲೀಕರೊಂದಿಗೆ ಸಭೆ ನಡೆಸಿದ್ದು, ಬೋರ್‌ವೆಲ್ ಕೊರೆಸಲು ಕಳೆದ ವರ್ಷ ನಿಗದಿ ಮಾಡಿದ್ದ ದರವನ್ನೇ ಈ ಬಾರಿಯೂ ಮುಂದುವರಿಸಲು ಸೂಚಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಮಳೆ ಕೊರತೆಯಿಂದಾಗಿ ರೈತರು ಈಗಾಗಲೇ ಸಂಕಷ್ಟದಲ್ಲಿದ್ದಾರೆ. ಬೆಳೆಗಳನ್ನು ಉಳಿಸಿಕೊಳ್ಳಲು ಅನಿವಾರ್ಯವಾಗಿ ಕೊಳವೆ ಬಾವಿ ಕೊರೆಸುತ್ತಿದ್ದಾರೆ. ಇಂತಹ ಸಂಕಷ್ಟದ ಸಮಯದಲ್ಲಿ ರಿಗ್ ಮಾಲೀಕರು ಕೃತಕ ಅಭಾವ ಸೃಷ್ಟಿಸ

ಅರುಣಾಚಲ ಗಡಿ ಬಳಿ ಚೀನಾ ಅಣೆಕಟ್ಟು: ಉಪಗ್ರಹ ದತ್ತಾಂಶ ಬಹಿರಂಗ

ಭರದಿಂದ ಸಾಗುತ್ತಿದೆ 60 ಗಿಗಾವ್ಯಾಟ್ ಸಾಮರ್ಥ್ಯದ ಮೆಡೋಗ್ ಜಲವಿದ್ಯುತ್ ಯೋಜನೆಯ ಕಾಮಗಾರಿ

ನವದೆಹಲಿ, ನ.24: ದೆಹಲಿ ಐಐಟಿಯ ಎಫ್ಐಟಿಟಿ ಕೇಂದ್ರದಲ್ಲಿ ರೂಪುಗೊಂಡಿರುವ ಭಾರತದ ಅರ್ಥ್ಸನ್ಸ್ ಲ್ಯಾಬ್ಸ್ ಎಂಬ ಜಿಯೋಸ್ಪೇಷಿಯಲ್ ಎಐ ನವೋದ್ಯಮದ ಉಪಗ್ರಹ ಚಿತ್ರಗಳ ವಿಶ್ಲೇಷಣೆಯು, ಯಾರ್ಲುಂಗ್ ತ್ಸಾಂಗ್ಪೊ (ಭಾರತದಲ್ಲಿ ಸಿಯಾಂಗ್) ನದಿಗೆ ಚೀನಾ ನಿರ್ಮಿಸುತ್ತಿರುವ 60 ಗಿಗಾವಾಟ್ ಸಾಮರ್ಥ್ಯದ ಮೆಡೋಗ್ ಜಲವಿದ್ಯುತ್ ಯೋಜನೆಯ ಕಾಮಗಾರಿ ವ್ಯಾಪಕವಾಗಿ ಹಾಗೂ ವೇಗವಾಗಿ ಸಾಗುತ್ತಿದೆ ಎಂಬುದನ್ನು ಬಹಿರಂಗಪಡಿಸಿದೆ.

ಮುಖ್ಯ ಅಣೆಕಟ್ಟು ಪ್ರದೇಶದಲ್ಲಿನ ಇಡೀ ಗ್ರಾಮಗಳನ್ನು ತೆರವುಗೊಳಿಸಲಾಗಿದ್ದು, ನದಿ ತಿರುಗಿಸುವ ಕಾಮಗಾರಿಗಳು ಗೋಚರಿಸುತ್ತಿವೆ ಮತ್ತು ಅರುಣಾಚಲ ಪ್ರದೇಶದ ಗಡಿ ಸಮೀಪ ಬೃಹತ್ ಕೈಗಾರಿಕಾ ಮೂಲಸೌಕರ್ಯ ನಿರ್ಮಾಣವಾಗಿದೆ ಎಂದು ವರದಿ ತಿಳಿಸಿದೆ.

ಆಗ್ನೇಯ ಟಿಬೆಟ್‌ನಲ್ಲಿ ಅರುಣಾಚಲ ಪ್ರದೇಶದ ಉತ್ತರಕ್ಕೆ 40ರಿಂದ 50 ಕಿ.ಮೀ ದೂರದಲ್ಲಿ ಮೆಕ್ಮಹೋನ್ ರೇಖೆಯ ಸಮೀಪ ಈ ಬಹುರಚನೆಯ ಅಣೆಕಟ್ಟು ವ್ಯವಸ್ಥೆ ರೂಪುಗೊಳ್ಳುತ್ತಿದೆ. ನದಿಯ ಪ್ರಸಿದ್ಧ ಗ್ರೇಟ್ ಯು-ಬೆಂಡ್ ಭಾಗದಲ್ಲಿ ಸುರಂಗ ಮಾರ್ಗ ಹಾಗೂ ಹಲವು ವಿದ್ಯುತ್ ಕೇಂದ್ರಗಳನ್ನು ಇದು ಒಳಗೊಂಡಿರಲಿದೆ. ಅಂದಾಜು 1.2 ಟ್ರಿಲಿಯನ್ ಯುವಾನ್ (15.60 ಲಕ್ಷ ಕೋಟಿ ರೂ. ಭಾರತದ ಬಜೆಟ್‌ನಲ್ಲಿ ಅರ್ಧದಷ್ಟು) ವೆಚ್ಚದಲ್ಲಿ ಐದು ಹಂತದ ವಿದ್ಯುತ್ ಕೇಂದ್ರಗಳನ್ನು ಯೋಜಿಸಲಾಗಿದ್ದು, ಸುಮಾರು 50 ಕಿ.ಮೀ ವ್ಯಾಪ್ತಿಯಲ್ಲಿ 2,000 ಮೀಟರ್‌ಗಿಂತ ಹೆಚ್ಚು ಎತ್ತರದ ಇಳಿಜಾರನ್ನು ಬಳಸಿಕೊಳ್ಳಲು ಸುಮಾರು 40 ಕಿ.ಮೀ ಉದ್ದದ ಸುರಂಗಗಳನ್ನು ನಿರ್ಮಿಸಲಾಗುತ್ತಿದೆ.

ಮೇನ್ಲಿಂಗ್ ಪಟ್ಟಣದ ಬಳಿಯ ದೊಡ್ಡ ಅಣೆಕಟ್ಟು, ಪೈ ಪಟ್ಟಣದ ಸಮೀಪದ ಕೆಳಹಂತದ ಅಣೆಕಟ್ಟು, ನಮ್ಚಾ ಬರ್ವಾ ಪರ್ವತದ ಮೂಲಕ ಹಾದುಹೋಗುವ ಸುರಂಗ ಮತ್ತು ಭಾರತ-ಚೀನಾ ಗಡಿ ಸಮೀಪದ ಮೆಡೋಗ್ ಕೌಂಟಿಯ ಕೆಳಭಾಗದಲ್ಲಿರುವ ಸುರಂಗದ ಹೊರದ್ವಾರ. ಈ ನಾಲ್ಕು ಪ್ರಮುಖ ನೆಲೆಗಳನ್ನು ವರದಿ ಗುರುತಿಸಿದೆ. ಮೇನ್ಲಿಂಗ್ ಅಣೆಕಟ್ಟು ಪ್ರದೇಶದಲ್ಲಿ 2025ರ ಜುಲೈನಲ್ಲಿ ಗ್ರಾಮಗಳು ಹಾಗೂ ಕೃಷಿ ಭೂಮಿ ಇದ್ದರೆ, ಡಿಸೆಂಬರ್ ವೇಳೆಗೆ ಅವುಗಳನ್ನು ತೆರವುಗೊಳಿಸಿ ಭೂಕಾಮಗಾರಿ ಆರಂಭಿಸಲಾಗಿತ್ತು.



2026ರ ಆಗಸ್ಟ್ ಚಿತ್ರಗಳಲ್ಲಿ ನದಿ ತಿರುಗಿಸುವ ಕಾರ್ಯ, ಗ್ರಾಮಗಳ ಸ್ಥಳಾಂತರ ಹಾಗೂ ಉತ್ತರ ದಂಡೆಯಲ್ಲಿ ಹೊಸ ರಸ್ತೆಗಳು, ತಾತ್ಕಾಲಿಕ ವಸತಿ ಮತ್ತು ಕಚೇರಿ ಕಟ್ಟಡಗಳು ಕಂಡುಬಂದಿವೆ.

ಮೆಡೋಗ್ ಸುರಂಗದ ಹೊರದ್ವಾರದ ಬಳಿ 2025ರ ಜುಲೈನ ಅಧಿಕೃತ ಭೂಮಿಪೂಜೆಗೂ ಮುನ್ನವೇ ಅಭಿವೃದ್ಧಿ ಕಾಮಗಾರಿ ಆರಂಭವಾಗಿತ್ತು ಎಂದು ವರದಿ ಉಲ್ಲೇಖಿಸಿದೆ. 2018ರಲ್ಲಿ ನದಿ ದಂಡೆಯ ರಸ್ತೆ ನಿರ್ಮಾಣ ಶುರುವಾಗಿ, 2019-2021ರಲ್ಲಿ ಸೇತುವೆ ಹಾಗೂ ಪ್ರಾಥಮಿಕ ಕಾಮಗಾರಿ, 2023-2024ರಲ್ಲಿ 30-35 ವಸತಿ-ಕೈಗಾರಿಕಾ ಕಟ್ಟಡಗಳು ಮತ್ತು 2024ರಲ್ಲಿ ಕಾಂಕ್ರೀಟ್ ಬ್ಯಾಚಿಂಗ್ ಘಟಕ ಸ್ಥಾಪನೆಯಾಗಿದೆ. ಇತ್ತ ಪೈ ಪಟ್ಟಣದ ಕೆಳಹಂತದ ಅಣೆಕಟ್ಟು ಸ್ಥಳದಲ್ಲಿ 2026ರ ಅಕ್ಟೋಬರ್‌ವರೆಗೆ ಸ್ಪಷ್ಟ ನಿರ್ಮಾಣ ಕಾಮಗಾರಿ ಕಂಡುಬಂದಿಲ್ಲ.

ಚೀನಾದ ಯೋಜನೆಯಿಂದ ಕೆಳಭಾಗದ ಪ್ರದೇಶಗಳ ಮೇಲಾಗುವ ಪರಿಣಾಮ ತಗ್ಗಿಸಲು ಭಾರತವು ಅರುಣಾಚಲ ಪ್ರದೇಶದಲ್ಲಿ 11,200 ಮೆಗಾವಾಟ್ ಸಾಮರ್ಥ್ಯದ ಸಿಯಾಂಗ್ ಮೇಲ್ಭಾಗದ ಬಹುಪಯೋಗಿ ಯೋಜನೆ (ಎಸ್‌ಯುಎಂಪಿ) ಪ್ರಸ್ತಾಪಿಸಿರುವುದರಿಂದ ಈ ವರದಿ ಮಹತ್ವ ಪಡೆದಿದೆ. ಸಿಯಾಂಗ್, ಅಪ್ಪರ್ ಸಿಯಾಂಗ್ ಮತ್ತು ಈಸ್ಟ್ ಸಿಯಾಂಗ್ ಜಿಲ್ಲೆಗಳಲ್ಲಿ ವ್ಯಾಪಿಸಲಿರುವ ಈ ಯೋಜನೆಯ ಜಲಾಶಯವು ಸುಮಾರು 9.2 ಶತಕೋಟಿ ಕ್ಯೂಬಿಕ್ ಮೀಟರ್ (325 ಟಿಎಂಸಿ ಅಡಿ ಅಥವಾ 9.2 ಲಕ್ಷ ಕೋಟಿ ಲೀಟರ್) (ಬಿಸಿಎಂ) ನೀರು ಸಂಗ್ರಹ ಸಾಮರ್ಥ್ಯ ಹೊಂದಿರಲಿದೆ ಎಂದು ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೇಮಾ ಖಂಡು ತಿಳಿಸಿದ್ದಾರೆ.

ಚೀನಾದ ಯೋಜನೆಯ 5.2 ಬಿಸಿಎಂ ಸಾಮರ್ಥ್ಯಕ್ಕಿಂತ ದೊಡ್ಡದಾಗಿರುವ ಸಿಯಾಂಗ್ ಜಲಾಶಯವು ನದಿಯ ಹರಿವನ್ನು ನಿಯಂತ್ರಿಸಲು, ಮೇಲ್ಭಾಗದಿಂದ ದಿಢೀರ್ ನೀರು ಬಿಡುಗಡೆಯಾದಾಗ ಎದುರಿಸಲು ಹಾಗೂ ಕೊರತೆಯ ಅವಧಿಯಲ್ಲಿ ನೀರಿನ ಲಭ್ಯತೆ ಕಾಯ್ದುಕೊಳ್ಳಲು ನೆರವಾಗಲಿದೆ ಎಂದು ಖಂಡು ಪ್ರತಿಪಾದಿಸಿದ್ದಾರೆ. ಚೀನಾದೊಂದಿಗೆ ಬದ್ಧತೆಯುಳ್ಳ ಜಲಹಂಚಿಕೆ ಒಪ್ಪಂದ ಮತ್ತು ಪಾರದರ್ಶಕ ದತ್ತಾಂಶ ಹಂಚಿಕೆ ವ್ಯವಸ್ಥೆ ಇಲ್ಲದಿರುವುದು ದೊಡ್ಡ ದೌರ್ಬಲ್ಯ ಎಂದು ಅವರು ಪದೇ ಪದೇ ಎಚ್ಚರಿಸಿದ್ದಾರೆ.

ಅಮಿತ್‌ಶಾಗೆ ಮನವಿ

ಇನ್ನೊಂದೆಡೆ, ಎಸ್‌ಯುಎಂಪಿ ಯೋಜನೆಗೆ ಸ್ಥಳೀಯವಾಗಿ ವಿರೋಧ ತೀವ್ರಗೊಂಡಿದ್ದು, ಸ್ಥಳಾಂತರ, ಭೂಮಿ ಮತ್ತು ಜೀವನೋಪಾಯದ ಆತಂಕ ವ್ಯಕ್ತಪಡಿಸಿ ಆದಿ ಸಮುದಾಯಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿವೆ. ಪೂರ್ವ-ಸಾಧ್ಯತಾ ಸಮೀಕ್ಷೆ ವಿರೋಧಿಸಿ ಉದ್ವಿಗ್ನತೆ ಹೆಚ್ಚಿದ ಹಿನ್ನೆಲೆಯಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿತ್ತು ಹಾಗೂ ಅಕ್ಟೋಬರ್‌ನಲ್ಲಿ ಪ್ರತಿಭಟನೆ ವೇಳೆ ಹಿಂಸಾಚಾರವೂ ನಡೆದಿತ್ತು. ಈ ವರದಿಯು ಉಪಗ್ರಹ ಚಿತ್ರಗಳನ್ನು ಆಧರಿಸಿ ಕಾಮಗಾರಿಯ ವ್ಯಾಪ್ತಿ ಮತ್ತು ವೇಗವನ್ನು ದಾಖಲಿಸಿದ್ದು, ಪರಿಸರ ಹಾನಿ ಅಥವಾ ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ಮೇಲಿನ ಪರಿಣಾಮಗಳನ್ನು ಅಳೆಯುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ರಾಸ್ ಅಲ್ ಖೈಮಾದಲ್ಲಿ ಭೀಕರ ಬಸ್-ಟ್ರಕ್ ಅಪಘಾತ ಭಾರತೀಯರು ಸೇರಿ 13 ಮಂದಿ ದುರ್ಮರಣ

ದುಬೈ/ರಾಸ್ ಅಲ್ ಖೈಮಾ, ನ. 24: ಸಂಯುಕ್ತ ಅರಬ್ ಸಂಸ್ಥಾನದ (ಗಂಇ) ರಾಸ್ ಅಲ್ ಖೈಮಾದಲ್ಲಿ ಮಂಗಳವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಭಾರತೀಯ ಪ್ರಜೆಗಳು ಸೇರಿದಂತೆ 13 ಮಂದಿ ಮೃತಪಟ್ಟಿದ್ದು, 14 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಕಳೆದ ಎರಡು ವಾರಗಳ ಅವಧಿಯಲ್ಲಿ ಯುಎಇಯಲ್ಲಿ ಸಂಭವಿಸಿದ ಎರಡನೇ ಅತಿದೊಡ್ಡ ರಸ್ತೆ ದುರಂತ ಇದಾಗಿದೆ.

ಯುಎಇ ಆಂತರಿಕ ಸಚಿವಾಲಯದ ಮಾಹಿತಿಯಂತೆ, ರಾಸ್ ಅಲ್ ಖೈಮಾ ನಗರದ 'ಅಲ್ ವತನ್ ರಸ್ತೆ'ಯಲ್ಲಿ ಪ್ರಯಾಣಿಕರ ಬಸ್ ಮತ್ತು ಟ್ರಕ್ ನಡುವೆ ಈ ಭೀಕರ ಡಿಕ್ಕಿ ಸಂಭವಿಸಿದೆ. ತಾಂತ್ರಿಕ ದೋಷದ ಕಾರಣದಿಂದ ರಸ್ತೆಯ ಬದಿಯಲ್ಲಿ ನಿಂತಿದ್ದ ಟ್ರಕ್‌ಗೆ, 41 ಮಂದಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಬಸ್ ಹಿಂಬದಿಯಿಂದ ವೇಗವಾಗಿ ಬಂದು ಡಿಕ್ಕಿ ಹೊಡೆದಿದೆ ಎಂದು ಪತ್ರಿಕೆ ವರದಿ ಮಾಡಿದೆ.

ಆರಂಭದಲ್ಲಿ 11 ಮಂದಿ ಮೃತಪಟ್ಟಿರುವುದಾಗಿ ಸಚಿವಾಲಯ ತಿಳಿಸಿತ್ತು. ಆದರೆ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ಗಾಯಾಳುಗಳು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದರಿಂದ ಸಾವಿನ ಸಂಖ್ಯೆ 13ಕ್ಕೆ ಏರಿಕೆಯಾಗಿದೆ. ಗಾಯಗೊಂಡಿರುವ 14 ಮಂದಿಗೆ ಸ್ಥಳೀಯ



ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮುಂದುವರಿದಿದೆ.

ಭಾರತೀಯ ದೂತಾವಾಸದಿಂದ ಸಹಾಯವಾಣಿ ಆರಂಭ

ದುಬೈನಲ್ಲಿರುವ ಭಾರತೀಯ ದೂತಾವಾಸ ಕಚೇರಿಯು ಮೃತರಲ್ಲಿ ಭಾರತೀಯ ಪ್ರಜೆಗಳೂ ಸೇರಿದ್ದಾರೆ ಎಂಬುದನ್ನು ಖಚಿತಪಡಿಸಿದೆ. ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಸಂತಾಪ ಸೂಚಿಸಿರುವ ದೂತಾವಾಸ, "ರಾಸ್ ಅಲ್ ಖೈಮಾದಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಭಾರತೀಯ ಪ್ರಜೆಗಳು ಸೇರಿದಂತೆ ಹಲವರು ಪ್ರಾಣ ಕಳೆದುಕೊಂಡಿರುವುದು ತೀವ್ರ ದುಃಖ ತಂದಿದೆ. ಸಂತ್ರಸ್ತ ಕುಟುಂಬಗಳನ್ನು ಸಂಪರ್ಕಿಸಲಾಗಿದ್ದು, ಅಗತ್ಯ ನೆರವು ನೀಡಲು ಸ್ಥಳೀಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇವೆ," ಎಂದು ತಿಳಿಸಿದೆ. ಅಲ್ಲದೆ, ತುರ್ತು ಮಾಹಿತಿ ಮತ್ತು ಸಹಾಯಕ್ಕಾಗಿ 24 ಗಂಟೆಗಳ ಉಚಿತ ಸಹಾಯವಾಣಿ ಸಂಖ್ಯೆ 800-46342 ಅನ್ನು ಬಿಡುಗಡೆ ಮಾಡಿದೆ.

ಘಟನಾ ಸ್ಥಳಕ್ಕೆ ಹಟ್ಟಾ ಪೊಲೀಸ್, ದುಬೈ ಆಂಬ್ಯುಲೆನ್ಸ್ ಮತ್ತು ಸಿವಿಲ್ ರಕ್ಷಣಾ ತಂಡಗಳು ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಅಪಘಾತಕ್ಕೆ ನಿಖರ ಕಾರಣ ತಿಳಿಯಲು ತನಿಖೆ ಆರಂಭಿಸಲಾಗಿದ್ದು, ಸಾರ್ವಜನಿಕರು ಯಾವುದೇ ವದಂತಿ ಅಥವಾ ಸುಳ್ಳು ಸುದ್ದಿಗಳನ್ನು ಹರಡದಂತೆ ರಾಸ್ ಅಲ್ ಖೈಮಾ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಎರಡು ವಾರಗಳಲ್ಲಿ ಎರಡನೇ ಭೀಕರ ದುರಂತ

ಕಳೆದ 12 ದಿನಗಳ ಅಂತರದಲ್ಲಿ ಯುಎಇಯಲ್ಲಿ ಸಂಭವಿಸಿದ ಎರಡನೇ ಭೀಕರ ಅಪಘಾತ ಇದಾಗಿದೆ. ಇದಕ್ಕೂ ಮುನ್ನ ನವೆಂಬರ್ 12ರಂದು ಫುಜೈರಾದ ಶೇಖ್ ಖಲೀಫಾ ಬಿನ್ ಜಾಯೆದ್ ರಸ್ತೆಯಲ್ಲಿ 18 ಕಾರುಗಳು ಮತ್ತು 5 ಟ್ರಕ್‌ಗಳ ನಡುವೆ ಸರಣಿ ಅಪಘಾತ ಸಂಭವಿಸಿತ್ತು. ಆ ದುರಂತದಲ್ಲಿ ನಾಲ್ವರು ಭಾರತೀಯರು (ಮೂವರು ಕೇರಳಿಗರು ಹಾಗೂ ಗುಜರಾತ್ ಮೂಲದ ಬಾಲಕ) ಮತ್ತು 10 ಮಂದಿ ಯುಎಇ ಪ್ರಜೆಗಳು ಸೇರಿ 14 ಮಂದಿ ಮೃತಪಟ್ಟಿದ್ದರು ಹಾಗೂ 7 ಮಂದಿ ಭಾರತೀಯರು ಸೇರಿ 30 ಜನ ಗಾಯಗೊಂಡಿದ್ದರು.

ಎಕ್ಸ್‌ಬಾಕ್ಸ್ ಕನ್ಸೋಲ್ ಕಿತ್ತುಕೊಂಡಿದ್ದಕ್ಕೆ ಗರಗಸ ಹಿಡಿದು ತಾಯಿಯನ್ನೇ ಅಟ್ಟಾಡಿಸಿದ ಬಾಲಕ

ಫ್ಲೋರಿಡಾ, ನ.24: ಅಮೆರಿಕದ ಫ್ಲೋರಿಡಾದಲ್ಲಿ 16 ವರ್ಷದ ಬಾಲಕನೊಬ್ಬ ತನ್ನ ಎಕ್ಸ್‌ಬಾಕ್ಸ್ ಗೇಮಿಂಗ್ ಕನ್ಸೋಲ್ ವಿಚಾರವಾಗಿ ನಡೆದ ಜಗಳದ ಬಳಿಕ ಗರಗಸ ಹಿಡಿದು ತಾಯಿಯನ್ನು ಅಟ್ಟಿಸಿಕೊಂಡು ಹೋದ ಆರೋಪದ ಮೇಲೆ ತೀವ್ರ ಹಲ್ಲೆ ಪ್ರಕರಣ ಎದುರಿಸುತ್ತಿದ್ದಾನೆ. ಬಹುನಿರೀಕ್ಷಿತ ಗ್ರ್ಯಾಂಡ್ ಥೆಫ್ಟ್ ಆಟೋ 6 (ಜಿಟಿಎ 6) ಏಡಿಯೋ ಗೇಮ್ ಬಿಡುಗಡೆಯಾದ ಕೆಲವೇ ದಿನಗಳ ನಂತರ ವೋಲುಸಿಯಾ ಕೌಂಟಿಯ ಡಿಲ್ಯಾಂಡ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ.

ಗೇಮಿಂಗ್ ಕನ್ಸೋಲ್ ತೆಗೆದುಕೊಂಡಿದ್ದಕ್ಕೆ ಬಾಲಕನು ತನ್ನ ತಾಯಿ ಮತ್ತು ಇತರ ಕುಟುಂಬ ಸದಸ್ಯರಿಗೆ ಬೆದರಿಕೆ ಹಾಕಿದ್ದಾನೆ ಎಂಬ ದೂರಿನ ಮೇರೆಗೆ ಸೋಮವಾರ ಉಪಶೆರಿಫ್‌ಗಳು ಸ್ಥಳಕ್ಕೆ ಧಾವಿಸಿದ್ದರು ಎಂದು ವೋಲುಸಿಯಾ ಕೌಂಟಿ ಶೆರಿಫ್ ಕಚೇರಿ ತಿಳಿಸಿದೆ.

ತಾಯಿ ತನ್ನ ಎಕ್ಸ್‌ಬಾಕ್ಸ್ ಕಸಿದುಕೊಂಡ ನಂತರ ಬಾಲಕ ಗರಗಸ ಹಿಡಿದು ತಾಯಿಯನ್ನು ಅಟ್ಟಿಸಿಕೊಂಡು ಹೋಗಿದ್ದಾನೆ ಮತ್ತು ಜಗಳದ ವೇಳೆ ಕುಟುಂಬದ ಸಾಕುಪ್ರಾಣಿಗಳಿಗೆ ಹಾನಿ ಮಾಡುವುದಾಗಿಯೂ ಬೆದರಿಕೆ ಹಾಕಿದ್ದಾನೆ ಎಂದು ವೋಲುಸಿಯಾ ಕೌಂಟಿ ಶೆರಿಫ್ ಮೈಕ್ ಚಿಟ್‌ವುಡ್ ಹೇಳಿದ್ದಾರೆ. ಘಟನೆಯಲ್ಲಿ ಬಳಸಲಾಗಿದೆ ಎನ್ನಲಾದ 18 ಇಂಚಿನ ಕಾರ್ವ್‌ಲೆಸ್ ಗ್ರೀನ್‌ವರ್ಕ್ಸ್ ಗರಗಸದ ಚಿತ್ರವನ್ನು ಅಧಿಕಾರಿಗಳು ಹಂಚಿಕೊಂಡಿದ್ದಾರೆ. ಸ್ಥಳೀಯ ಮಾಧ್ಯಮ ವರದಿಗಳಲ್ಲಿ ಉಲ್ಲೇಖಿಸಲಾದ ಬಂಧನ ಅಫಿಡವಿಟ್ ಪ್ರಕಾರ, ತಾಯಿ ಕನ್ಸೋಲ್ ವಶಪಡಿಸಿಕೊಂಡ ನಂತರ ಜಗಳ ತಾರಕಕ್ಕೇರಿದ್ದು, ಬಾಲಕ ಅಡಗಿಸಿಟ್ಟಿದ್ದ ಸೌಂದರ್ಯವರ್ಧಕಗಳ ವಿಚಾರವೂ ಈ ವಿವಾದದಲ್ಲಿ ಸೇರಿತ್ತು ಎನ್ನಲಾಗಿದೆ. ಬಾಲಕ ಗರಗಸವನ್ನು ಚಾಲನೆ ಮಾಡಿ, ಅದನ್ನು ತನ್ನ ಮುಖದ ಬಳಿ ರಿವ್ ಮಾಡುತ್ತಾ ಕೊಲೆ ಬೆದರಿಕೆ ಹಾಕಿದ್ದಾಗಿ ತಾಯಿ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಸುರಕ್ಷತೆಯ ಭಯದಿಂದ ಮೊಬೈಲ್‌ನಲ್ಲಿ ಘಟನೆಯನ್ನು ರೆಕಾರ್ಡ್ ಮಾಡಲು ಆರಂಭಿಸಿದ ಅವರು ಮನೆಯಿಂದ ಹೊರಗೆ ಓಡಿ ಹೋಗಿ ಪೊಲೀಸ್ ನೆರವಿಗೆ ಕಾದಿದ್ದರು ಎನ್ನಲಾಗಿದೆ. ಜಗಳದ ವೇಳೆ ತಾಯಿಯನ್ನು ಹೆದರಿಸಲು ಗರಗಸ ಎತ್ತಿಕೊಂಡು ಆಕೆಯನ್ನು ಅಟ್ಟಿಸಿಕೊಂಡು ಹೋದಿದ್ದಾಗಿ ಬಾಲಕ ಒಪ್ಪಿಕೊಂಡಿದ್ದಾನೆ ಎನ್ನಲಾಗಿದೆ.

ಘಟನೆಯ ನಂತರ 16 ವರ್ಷದ ಬಾಲಕನ ವಿರುದ್ಧ ಫ್ಲೋರಿಡಾ ಕಾನೂನಿನಡಿ ಮೂರನೇ ದರ್ಜೆಯ ಅಪರಾಧವಾದ ಮಾರಕಾಸ್ತ್ರದಿಂದ ತೀವ್ರ ಹಲ್ಲೆ ನಡೆಸಿದ ಆರೋಪ ಹೊರಿಸಲಾಗಿದೆ. ನಂತರ ಬಾಲಕನನ್ನು ವೋಲುಸಿಯಾ ಫ್ಯಾಮಿಲಿ ರಿಸೋರ್ಸ್ ಸೆಂಟರ್‌ಗೆ ಕರೆದೊಯ್ಯಲಾಯಿತು ಎಂದು ಶೆರಿಫ್ ಚಿಟ್‌ವುಡ್ ದೃಢಪಡಿಸಿದ್ದಾರೆ, ಆದರೆ ಪ್ರಕರಣದ ಹೆಚ್ಚಿನ ವಿವರಗಳನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ. ನವೆಂಬರ್ 19ರಂದು ರಾಕ್‌ಸ್ಟಾರ್ ಗೇಮ್ಸ್ ಸಂಸ್ಥೆಯು ಗ್ರ್ಯಾಂಡ್ ಥೆಫ್ಟ್ ಆಟೋ 6 ಬಿಡುಗಡೆ ಮಾಡಿದ ಕೆಲವೇ ದಿನಗಳಲ್ಲಿ ಈ ಘಟನೆ ನಡೆದಿರುವುದರಿಂದ ಆನ್‌ಲೈನ್‌ನಲ್ಲಿ ಗಮನ ಸೆಳೆದಿದೆ.

ವಿಶ್ವಾದ್ಯಂತ ಆಟಗಾರರಲ್ಲಿ ಭಾರಿ ಉತ್ಸಾಹ ಮೂಡಿಸಿರುವ ಈ ಗೇಮ್‌ನ ಹಿಂಸಾತ್ಮಕ ದೃಶ್ಯಗಳ ಕ್ಲಿಪ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ವಿಷಯ ಮತ್ತು ವಾಸ್ತವಿಕತೆಯ ಕುರಿತು ಚರ್ಚೆ ಹುಟ್ಟುಹಾಕಿವೆ. ಕೆಲವರು ಗೇಮ್ ಬಿಡುಗಡೆಯ ಉತ್ಸಾಹಕ್ಕೆ ಈ ಘಟನೆಯನ್ನು ತಳುಕು ಹಾಕಿ ಅಪನಂಬಿಕೆ ಮತ್ತು ವ್ಯಂಗ್ಯದಿಂದ ಪ್ರತಿಕ್ರಿಯಿಸಿದರೆ, ಇನ್ನು ಕೆಲವರು ಅತಿಯಾದ ಗೇಮಿಂಗ್ ಮತ್ತು ಆಕ್ರಮಣಕಾರಿ ವರ್ತನೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ವಿಡಿಯೋ ಗೇಮ್‌ನ ವಿಷಯಕ್ಕೂ ಬಾಲಕನ ಕೃತ್ಯಕ್ಕೂ ಯಾವುದೇ ನೇರ ಸಂಬಂಧ ಇರುವುದನ್ನು ಅಧಿಕಾರಿಗಳು ದೃಢಪಡಿಸಿಲ್ಲ ಹಾಗೂ ಈ ಪ್ರಕರಣವು ಎಕ್ಸ್‌ಬಾಕ್ಸ್, ಕನ್ಸೋಲ್ ಕುರಿತ ಕೌಟುಂಬಿಕ ವಿವಾದದ ಸುತ್ತಲೇ ಸುತ್ತುತ್ತಿದೆ.

ಭಾರತೀಯ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಸ್ಥಾನಕ್ಕೆ ತ್ರಿಕೋನ ಸ್ಪರ್ಧೆಯಿಂದ ಹೊರನಡೆದ ಪಿ.ಟಿ.ಉಷಾ

ನವದೆಹಲಿ, ನ.24: ಭಾರತೀಯ ಒಲಿಂಪಿಕ್ ಸಂಸ್ಥೆಗೆ (ಐಓಎ) ಹೊಸ ರೂಪ ಸಿಗುವ ಸಾಧ್ಯತೆ ದಟ್ಟವಾಗಿದ್ದು, ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾದ ಮಂಗಳವಾರ ಒಲಿಂಪಿಕ್ ಶೂಟಿಂಗ್ ಪದಕ ವಿಜೇತ ಗಗನ್ ನಾರಂಗ್ ಮತ್ತು ಭಾರತೀಯ ಆರ್ಚರಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೀರೇಂದ್ರ ಸಚ್‌ದೇವ ಅವರು ಐಓಎ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ.



ಐಓಎ ಮಾಜಿ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಕೂಡ ಅಧ್ಯಕ್ಷ ಸ್ಥಾನದ ಕಣದಲ್ಲಿದ್ದು, ಈ ಮೂಲಕ ಅಧ್ಯಕ್ಷ ಪಟ್ಟಕ್ಕೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಡಿಸೆಂಬರ್ 1ರಂದು ಅಂತಿಮ ನಾಮಪತ್ರಗಳ ಪಟ್ಟಿ ಪ್ರಕಟವಾಗಲಿದ್ದು, ಅದಕ್ಕೂ ಮುನ್ನ ಅಭ್ಯರ್ಥಿಗಳಿಗೆ ನಾಮಪತ್ರ ಹಿಂಪಡೆಯಲು ಅವಕಾಶವಿದೆ ಮತ್ತು ಡಿಸೆಂಬರ್ 5ರಂದು ಚುನಾವಣೆ ನಿಗದಿಯಾಗಿದೆ. ಆದರೆ, ಟ್ರ್ಯಾಕ್ ದಿಗ್ಗಜೆ ಪಿ.ಟಿ. ಉಷಾ ಅವರು ಮಂಗಳವಾರ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾ ರೇಸ್‌ನಿಂದ ಹೊರಗುಳಿದಿದ್ದು, ಐಓಎ ಅಧ್ಯಕ್ಷರಾಗಿ ಅವರ ನಾಲ್ಕು ವರ್ಷಗಳ ಅಧಿಕಾರಾವಧಿ ಅಂತ್ಯಗೊಂಡಂತಾಗಿದೆ. ಐಓಎಯ ಮೊದಲ ಮಹಿಳಾ ಅಧ್ಯಕ್